# ವಿಶೇಷ ಅಗತ್ಯತೆಯುಳ್ಳ ಮಕ್ಕಳ ಬಗೆಗಿನ ಮನಸ್ಥಿತಿ, ಸಮನ್ವಯ ಶಿಕ್ಷಣ ನೀಡುವಲ್ಲಿನ ಸವಾಲುಗಳು

– ಶೈಲ ಎನ್.

## ಲೇಖನದ ಸಾರಾಂಶ

ವಿಶೇಷ ಅಗತ್ಯಗಳುಳ್ಳ ಮಕ್ಕಳನ್ನು ಗುರುತಿಸಿ ಇತರ ಎಲ್ಲ ಮಕ್ಕಳಂತೆಯೇ ಅವರಿಗೆ ಗುಣಾತ್ಮಕ ಶಿಕ್ಷಣವನ್ನು ಒದಗಿಸಲು ಶಿಕ್ಷಣ ಇಲಾಖೆ ಹಲವು ಕ್ರಮಗಳನ್ನು ಕೈಗೊಂಡಿದೆ. *ಅದರಂತೆ ರಾಜ್ಯದ ಪ್ರತಿಯೊಂದು ಬ್ಲಾಕ್‌ನಲ್ಲಿ ತರಬೇತಿ ಹೊಂದಿದ ಸಮನ್ವಯ ಶಿಕ್ಷಣ ಸಂಯೋಜಕರನ್ನು ನಿಯೋಜಿಸಿದೆ. ಶಿಕ್ಷಕರು, ಪೋಷಕರು ಮತ್ತು ಸ್ಥಳೀಯ ಸಂಪನ್ಮೂಲ ಸಂಸ್ಥೆಗಳ ಸಹಯೋಗದೊಂದಿಗೆ ವಿಶೇಷ ಅಗತ್ಯಗಳುಳ್ಳ ಮಕ್ಕಳನ್ನು ಗುರುತಿಸಿ ಅವರು ಸೂಕ್ತವಾಗಿ ಸ್ಪಂದಿಸಬೇಕಾಗಿದೆ. ಈ ಲೇಖನದಲ್ಲಿ ಮಂಡ್ಯ ದಕ್ಷಿಣ ಶೈಕ್ಷಣಿಕ ಬ್ಲಾಕ್‌ನ ವಿಶೇಷ ಅಗತ್ಯಗಳುಳ್ಳ ಕೆಲವು ಮಕ್ಕಳ ಮನೆಗಳಿಗೆ ಭೇಟಿ ನೀಡಿ ಪೋಷಕರು ಮತ್ತು ಶಿಕ್ಷಕರೊಂದಿಗೆ ಸಂದರ್ಶನ ನಡೆಸಿರುವುದಲ್ಲದೆ ತರಗತಿ ವೀಕ್ಷಣೆಯ ಮೂಲಕ ಅಂತಹ ಮಕ್ಕಳನ್ನು ಒಳಗೊಳ್ಳುವ ಪ್ರಕ್ರಿಯೆಯ ಕುರಿತಂತೆ ಲೇಖಕರು ಪ್ರಮುಖ ಪ್ರಶ್ನೆಗಳನ್ನು ಎತ್ತಿದ್ದಾರೆ. ಭಾಗೀದಾರರ ನಿಲುವುಗಳು ಮತ್ತು ಆಚರಣೆಗಳಲ್ಲಿ ಕಂಡುಬರುವ ವಿರೋಧಾಭಾಸಗಳನ್ನು ತೆರೆದಿಡುವ ಪ್ರಯತ್ನ ಮಾಡಿ ಸೂಕ್ತ ಪರಿಹಾರ ಕ್ರಮಗಳನ್ನು ಸ್ವಾನುಭವದ ಹಿನ್ನೆಲೆಯಲ್ಲಿ ಸೂಚಿಸಿದ್ದಾರೆ.*

## ಪೀಠಿಕೆ

ದೇಶದ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವ ಮೂಲಕ ಉತ್ತಮ ನಾಗರಿಕರನ್ನಾಗಿ ಬೆಳೆಸುವುದೇ ಶಿಕ್ಷಣದ ಮೂಲ ಆಶಯ. ಇದರ ಅರ್ಥ ಯಾವುದೇ ಮಗುವನ್ನೂ ಶಿಕ್ಷಣದಿಂದ ಕಡೆಗಣಿಸುವಂತಿಲ್ಲ. ಶಿಕ್ಷಣದಿಂದ ದೂರ ಉಳಿಯುವಂತೆ ಮಾಡುವುದರಿಂದಷ್ಟೇ ಕಡೆಗಣಿಸಿದಂತಾಗುವುದೆ? ಅಲ್ಲ. ಮಕ್ಕಳನ್ನು ಕಲಿಕೆಯ ಹಂತದಲ್ಲಿ ಕೆಲವು ಕಾರಣಗಳಿಂದ ನಿರ್ಲಕ್ಷಿಸುವುದು ಹಾಗೂ ಅವರ ಬಗ್ಗೆ ನಿರಾಸಕ್ತಿ ತೋರುವುದೂ ಸಹ ಶಿಕ್ಷಣದಿಂದ ಕಡೆಗಣಿಸಿದಂತಲ್ಲವೇ?

ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನೇ ತೆಗೆದುಕೊಳ್ಳೋಣ. ಅವರು ಸಾಮಾನ್ಯರಂತೆ ಕಲಿಕೆಯಲ್ಲಿ ತೊಡಗಿಕೊಳ್ಳುವುದು ಕಷ್ಟಸಾಧ್ಯ. ಅವರನ್ನು ಯಾವ ಪ್ರಕ್ರಿಯೆಗಳ ಮೂಲಕ ಕಲಿಕೆಗೆ ಅನುಕೂಲಿಸಿ ಶಿಕ್ಷಣ ವ್ಯವಸ್ಥೆಯಲ್ಲಿ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ? ಹಾಗೂ ಆ ನಿಟ್ಟಿನಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದ್ದೇವೆ? ಎಂಬುದರ ಬಗ್ಗೆ ಉತ್ತರ ಹುಡುಕುತ್ತಾ

ಹೊರಟಾಗ ನಾವು ಎಷ್ಟರ ಮಟ್ಟಿಗೆ ಸಮನ್ವಯತೆ ಸಾಧಿಸಿದ್ದೇವೆ ಎನ್ನುವುದು ಸ್ಪಷ್ಟವಾಗಬಹುದು. ಇಲ್ಲಿ ಸಮನ್ವಯತೆ ಸಾಧಿಸುವಲ್ಲಿ ಶಿಕ್ಷಕರ ಪಾತ್ರ ಶಾಲೆಗೆ ಮಾತ್ರ ಸೀಮಿತವೆ? ಪಾಲಕರೂ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವಂತೆ ಮಾಡುತ್ತಾ ಸಮಾಜದಲ್ಲಿ ಅವರನ್ನು ಸಾಮಾನ್ಯರಂತೆ ಆತ್ಮವಿಶ್ವಾಸದಿಂದ ಬದುಕುವ ರೀತಿಯಲ್ಲಿ ವಾತಾವರಣವನ್ನು ಸೃಷ್ಟಿಸುವುದೂ ಸೇರಿದೆಯೇ? ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವಾಗ ನನಗಾದ ಅನುಭವಗಳು ಭಿನ್ನವಾಗಿ ಕಾಣುತ್ತಿವೆ. ಸಾಕಷ್ಟು ಸವಾಲುಗಳ, ಸಮಸ್ಯೆಗಳ ಅನುಭವಗಳೇ ಹೆಚ್ಚು. ಈ ಕಾರಣದಿಂದಾಗಿ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಸಮನ್ವಯ ಶಿಕ್ಷಣದ ಬಗೆಗಿನ ಪ್ರಸ್ತುತ ದೃಷ್ಟಿಕೋನಗಳ ವಿಮರ್ಶೆ ಅಗತ್ಯವೆನಿಸುತ್ತದೆ.

ಸಮನ್ವಯ ಶಿಕ್ಷಣ ಎಲ್ಲಾ ಮಕ್ಕಳಿಗೂ ಅವರವರ ಅಗತ್ಯಗಳನ್ನು ಆಧರಿಸಿ ನೀಡುವ ಸಮಾನವಾದ ಶಿಕ್ಷಣವಾಗಿದೆ. ಇಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳು ಸಹ ಇತರ ಮಕ್ಕಳೊಡನೆ ಸಮಾನ ಶೈಕ್ಷಣಿಕ ಅವಕಾಶಗಳನ್ನು ಪಡೆಯುವ ವಾತಾವರಣವಿರುತ್ತದೆ. ವಿಶೇಷ ಅಗತ್ಯವುಳ್ಳ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಸಾಮಾನ್ಯ ಶಿಕ್ಷಕ/ಶಿಕ್ಷಕಿಯರಿಂದಲೇ ಪೂರೈಸುವುದರ ಮೂಲಕ ಸರ್ವರಿಗೂ ಶಿಕ್ಷಣದ ಅವಕಾಶ ನೀಡುವುದು ಇದರ ಉದ್ದೇಶವಾಗಿದೆ.

ಯುನೆಸ್ಕೋ 2004ರಲ್ಲಿ ಗುರುತಿಸಿರುವಂತೆ "ಕಲಿಕೆ, ಸಂಸ್ಕೃತಿ ಹಾಗೂ ಸಮುದಾಯಗಳಲ್ಲಿ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಹಾಗೂ ಶಿಕ್ಷಣದೊಳಗೆ ಮತ್ತು ಶಿಕ್ಷಣದಿಂದ ಪ್ರತ್ಯೇಕತೆಯನ್ನು ಕಡಿಮೆಗೊಳಿಸುವ ಮೂಲಕ ಕಲಿಯುವವರೆಲ್ಲರ ವೈವಿಧ್ಯಮಯ ಅಗತ್ಯಗಳಿಗೆ ಸ್ಪಂದಿಸುವ ಒಂದು ಪ್ರಕ್ರಿಯೆಯೇ ಸಮನ್ವಯ ಶಿಕ್ಷಣ."

ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟಿನ ಪ್ರತಿಕ್ರಿಯಾತ್ಮಕ ಪ್ರಬಂಧ (position paper)ದ ಪ್ರಕಾರ ವಿಶೇಷ ಅಗತ್ಯ ಉಳ್ಳವರನ್ನು ಗ್ರಹಿಸುವ ನಾಲ್ಕು ಮಾದರಿಗಳಿವೆ.

1. ಕಲ್ಯಾಣ ಮಾದರಿ (Charity model)
2. ಕ್ರಿಯಾತ್ಮಕ ಮಾದರಿ (Functional model)
3. ವೈದ್ಯಕೀಯ/ಜೈವಿಕ ವಿವರಣೆ ನೀಡುವ ಮಾದರಿ (Bio-centric model)
4. ಮಾನವ ಹಕ್ಕುಗಳ ಮಾದರಿ (Human Rights model)

- ಕಲ್ಯಾಣ ಮಾದರಿ ವಿಕಲಚೇತನರಿಗಾಗಿ ಪ್ರತ್ಯೇಕವಾದ ಶಾಲೆ, ವಾತಾವರಣ ಬೇಕೆಂದು ನಂಬುತ್ತದೆ. ಅವರನ್ನು ಅತ್ಯಂತ ಅನುಕಂಪದ ದೃಷ್ಟಿಯಿಂದ ನೋಡುವುದರ ಮೂಲಕ ಸದಾ ಪೋಷಿಸುವವರ/ಕಾಯುವವರ ಅಗತ್ಯತೆಯನ್ನು ಪ್ರತಿಪಾದಿಸುತ್ತದೆ. ಈ ಮೂಲಕ ಅವರನ್ನು ತೀವ್ರವಾಗಿ ಮೂಲೆಗುಂಪಾಗಿಸುತ್ತದೆ.
- ಕ್ರಿಯಾತ್ಮಕ ಮಾದರಿ ಶಾಲೆಯ ಪರಿಸರ ಎಲ್ಲಾ ಸಾಮರ್ಥ್ಯದ ಮಕ್ಕಳಿಗೂ ಎಷ್ಟು ಪೂರಕವಾಗಿದೆ ಎಂಬ ಪ್ರಶ್ನೆಗಿಂತ ಹೆಚ್ಚಾಗಿ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳುವಲ್ಲಿ ವಿಕಲಚೇತನರು ಎಷ್ಟು ಸಮರ್ಥರು ಎನ್ನುವುದರ ಮೇಲೆ ಗಮನ ಹರಿಸುತ್ತದೆ. ಈ ಮಾದರಿಯ ಪ್ರಕಾರ, ಮಕ್ಕಳು ತಮ್ಮ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಶಾಲಾ ಸೌಕರ್ಯಗಳನ್ನು ಪಡೆದುಕೊಳ್ಳಬಹುದು. ಅಂದರೆ ಈ ಶಾಲೆಯ ಪರಿಸರದಲ್ಲಿ ಮಕ್ಕಳಿಗೆ ಎಷ್ಟರಮಟ್ಟಿಗೆ ಸ್ವತಂತ್ರವಾಗಿ ಸಂಚರಿಸಲು ಸಾಧ್ಯವೋ ಅಷ್ಟರ ಮಟ್ಟಿಗೆ ಮಾತ್ರ ಅವರಿಗೆ ಅದು ದಕ್ಕುತ್ತದೆ.

- ವೈದ್ಯಕೀಯ/ಜೈವಿಕ ನಿಲುವಿನ ಮಾದರಿ ವಿಕಲಚೇತನರನ್ನು ರೋಗಿಗಳಂತೆ ಮತ್ತು ಅಸಹಜ ಎಂಬಂತೆ ನೋಡುತ್ತದೆ.
- ಮಾನವ ಹಕ್ಕುಗಳ ಮಾದರಿ ವಿಕಲಚೇತನವನ್ನು ಮನುಷ್ಯ ಸಂಸ್ಕೃತಿಯ ಒಂದು ಮುಖ್ಯವಾದ ಆಯಾಮವಾಗಿ ನೋಡುತ್ತದೆ. ಇದರ ಪ್ರಕಾರ ಹಕ್ಕುಗಳು ಪ್ರತಿಯೊಬ್ಬ ವ್ಯಕ್ತಿಗೂ ದೊರಕಲೇಬೇಕಾದ ಮತ್ತು ಯಾವುದೇ ವ್ಯಕ್ತಿಯಿಂದ ಕಸಿದುಕೊಳ್ಳಲಾಗದ ಅಂಶವೆಂಬ ನಿಲುವನ್ನು ತಳೆದು ವೈವಿಧ್ಯತೆಯನ್ನು ಖಾತ್ರಿ ಪಡಿಸುತ್ತದೆ. ವಿಕಲಚೇತನರನ್ನು ಒಳಗೊಳಿಸಲು ಅಡಚಣೆಯಾಗಿ ನಿಂತಿರುವ ಗೋಡೆಗಳನ್ನು ಒಡೆಯಲು ಪ್ರಯತ್ನಿಸುತ್ತದೆ. ಸಮತೆ ಮತ್ತು ತಾರತಮ್ಯವಿಲ್ಲದ ಪರಿಸರವನ್ನು ಹಾಗೂ ಇದನ್ನು ಪೂರೈಸಲು, ಎಲ್ಲರಿಗೂ ಲಭ್ಯವಾಗಿಸಲು ಸಾಧ್ಯವಾಗಿಸುವ ಸೌಕರ್ಯಗಳನ್ನು ಒದಗಿಸಬೇಕೆಂದು ಪ್ರತಿಪಾದಿಸುತ್ತದೆ. ಇದಲ್ಲದೆ, ಪ್ರತಿ ಮಗು (ವ್ಯಕ್ತಿಯ)ವಿನ ಭಾಗವಹಿಸುವಿಕೆಗೆ ಮಹತ್ವ ನೀಡುತ್ತದೆ, ಮತ್ತು ಪ್ರತಿಯೊಬ್ಬರ ವೈಯಕ್ತಿಕ ಜೀವನ/ನಿಲುವುಗಳನ್ನು ಗೌರವಿಸುತ್ತದೆ.

ವಿಕಲಚೇತನರಿಗೆ ಸೂಕ್ತ ಶೈಕ್ಷಣಿಕ ಅವಕಾಶಗಳನ್ನು ನೀಡುವುದು ಕೇವಲ ಕರ್ತವ್ಯವಷ್ಟೇ ಅಲ್ಲ, ಇದೊಂದು ಶಾಸನಬದ್ಧ ಜವಾಬ್ದಾರಿ ಕೂಡ. ಆದ್ದರಿಂದ ಈ ಕೆಳಗಿನ ಅಂಶಗಳ ಅಧ್ಯಯನದ ಮೂಲಕ ಸಮನ್ವಯ ಶಿಕ್ಷಣದ ದಾರಿಯನ್ನು ಅವಲೋಕಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

## ಉದ್ದೇಶ

ವಿಕಲ ಚೇತನ ಮಕ್ಕಳ ಬಗ್ಗೆ ಸ್ವಯಂ ಆ ಮಕ್ಕಳು, ಶಿಕ್ಷಕರು ಮತ್ತು ಪೋಷಕರು ತಳೆದಿರುವ ನಂಬಿಕೆಗಳು ಮತ್ತು ಅಭಿಪ್ರಾಯಗಳು ಎಲ್ಲಾ ಮಕ್ಕಳನ್ನೂ ಒಳಗೊಳ್ಳುವ ಶಿಕ್ಷಣದ ಗುರಿ ಈಡೇರಿಕೆಗೆ ಪುಷ್ಟಿ ನೀಡುತ್ತಿವೆಯೆ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ವಿಶ್ಲೇಷಿಸುವುದು.

## ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಕ್ಷೇತ್ರ ಮತ್ತು ಪ್ರಮಾಣ

ಅಧ್ಯಯನವನ್ನು ಮಂಡ್ಯ ದಕ್ಷಿಣ ತಾಲ್ಲೂಕಿನಲ್ಲಿ ಕೈಗೊಳ್ಳಲಾಯಿತು. ಪೂರ್ವ ನಿರ್ಧಾರದಂತೆ ಸಿದ್ಧಪಡಿಸಿಕೊಳ್ಳಲಾಗಿದ್ದ ತಲಾ 4 ಪ್ರಶ್ನೆಗಳನ್ನು ಪಾಲಕರಿಗೆ ಮತ್ತು ಶಿಕ್ಷಕರಿಗೆ ಕೇಳುವ ಮೂಲಕ ಸಂದರ್ಶನ ನಡೆಸಿ ಅವರಿಂದ ವಸ್ತುನಿಷ್ಠ ಮಾಹಿತಿ ಪಡೆಯಲು ಪ್ರಯತ್ನಿಸಲಾಯಿತು. ಈ ನಿಟ್ಟಿನಲ್ಲಿ ಆಯ್ದ ಪ್ರಶ್ನೆಗಳಿಗೆ ಮುಕ್ತವಾಗಿ ಚರ್ಚಿಸುವಂತೆ ಮಾಡಲು ಪೂರಕ ಪ್ರಶ್ನೆಗಳನ್ನೂ ಸಂದರ್ಭಕ್ಕನುಗುಣವಾಗಿ ಬಳಸಲಾಯಿತು. ಆಯ್ಕೆಯಾದ 10 ಶಾಲೆಗಳಲ್ಲಿರುವ 16 ಮಕ್ಕಳಲ್ಲಿ 6 ಬುದ್ಧಿಮಾಂದ್ಯತೆಯ ಮಕ್ಕಳು, 1 ಶ್ರವಣ ದೋಷವಿರುವ ಮಗು, 3 ದೃಷ್ಟಿದೋಷವಿರುವ ಮಕ್ಕಳು, 5 ದೈಹಿಕ ನ್ಯೂನತೆ ಇರುವ ಮಕ್ಕಳು ಹಾಗೂ 1 ಕುಬ್ಜತೆ ಇರುವ ಮಗು, ಹೀಗೆ 5 ಭಿನ್ನ ತರಹದ ನ್ಯೂನತೆ ಇರುವ ಮಕ್ಕಳು ಇರುತ್ತಾರೆ.

## ಅ. ಶಿಕ್ಷಕರಿಗೆ ಕೇಳಲಾದ ಪ್ರಶ್ನೆಗಳು

**ಪ್ರಶ್ನೆ 1 :** ಮಗುವಿಗೆ ತನ್ನನ್ನು ದೂರ ಮಾಡುತ್ತಿದ್ದಾರೆ ಎನ್ನುವ ಭಾವನೆ ಬಾರದಿರುವ ಹಾಗೆ ಮಾಡಲು ನೀವು ಏನಾದರೂ ಪ್ರಕ್ರಿಯೆ ಅಳವಡಿಸಿಕೊಂಡಿದ್ದೀರಾ?

**ಪ್ರಶ್ನೆ 2 :** ಮಗುವನ್ನು ಪರಿಣಾಮಕಾರಿಯಾಗಿ ತರಗತಿಯ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ನೀವು ಯಾವ ರೀತಿಯ ಪ್ರಕ್ರಿಯೆಗಳನ್ನು ಅನುಸರಿಸುತ್ತಿದ್ದೀರಿ?

**ಪ್ರಶ್ನೆ 3 :** ಇಂತಹ ವಿಶೇಷ ಅಗತ್ಯತೆಗಳುಳ್ಳ ಮಕ್ಕಳಿಗೆ ಶಿಕ್ಷಣ ಕೊಡುವ ಬಗ್ಗೆ ನಿಮ್ಮ ನಿಲುವೇನು? (ಈ ಪ್ರಶ್ನೆಯ ಹಿಂದೆ ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗಬಾರದು. ಮಗುವಿಗೆ ಪೂರಕವಾಗುವಂತಹ ಶಿಕ್ಷಣಾವಕಾಶಗಳನ್ನು ಒದಗಿಸಬೇಕು ಎಂಬ ಆಶಯ ಇದೆ.)

**ಪ್ರಶ್ನೆ 4 :** ವಿಶೇಷ ಅಗತ್ಯಗಳುಳ್ಳ ಮಕ್ಕಳ ಭವಿಷ್ಯದ ಬಗ್ಗೆ ನಿಮಗೆ ಏನನ್ನಿಸುತ್ತದೆ? ಅವರಿಗೆ ಯಾವ ರೀತಿಯ ಅವಕಾಶಗಳು ಬೇಕಾಗುತ್ತವೆ? (ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ತರವಾದುದು. ಪ್ರತಿ ಮಗುವಿನ ವಿಶೇಷತೆ, ಸಾಮರ್ಥ್ಯ, ಮಿತಿಗಳನ್ನು ಅರಿತು ಅವರ ಅಗತ್ಯಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಾಣ ಮಾಡುವ ಮೂಲಕ ಪ್ರತಿಯೊಂದು ಮಗುವನ್ನೂ ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಮತ್ತು ಸಮಾಜದ ಉತ್ತಮ ನಾಗರಿಕನಾಗುವ ದಾರಿಯನ್ನು ನಿರ್ಮಾಣ ಮಾಡಬೇಕು ಎಂಬ ಹಿನ್ನೆಲೆಯಲ್ಲಿ ಈ ಪ್ರಶ್ನೆ ಕೇಳಲಾಯಿತು).

## ಆ. ಪಾಲಕರಿಗೆ ಕೇಳಲಾದ ಪ್ರಶ್ನೆಗಳು

**ಪ್ರಶ್ನೆ 1 :** ನಿಮ್ಮ ಮಗುವನ್ನು ಹೇಗೆ ಪಾಲನೆ ಮಾಡುತ್ತೀರಿ?

**ಪ್ರಶ್ನೆ 2 :** ನಿಮ್ಮ ಮಗುವಿಗೆ ಸಮಾಜದ ಜೊತೆ ಹೊಂದಾಣಿಕೆಗಾಗಿ ಹಾಗೂ ದಿನನಿತ್ಯದ ಚಟುವಟಿಕೆಗಳನ್ನು / ನಿತ್ಯಕರ್ಮಗಳನ್ನು ಸ್ವತಃ ನೋಡಿಕೊಳ್ಳಲು ಹೇಗೆ ತಯಾರಿ ಮಾಡುತ್ತಿದ್ದೀರಿ? (ಪಾಲಕರು ತಮ್ಮ ಮಕ್ಕಳನ್ನು ಸಮಾಜದ ಜೊತೆ ಹೊಂದಿಕೊಳ್ಳಲು ಹೇಗೆ ಅಣಿಗೊಳಿಸುತ್ತಿದ್ದಾರೆ ಎಂಬುದನ್ನು ಅರಿಯುವ ದೃಷ್ಟಿಯಿಂದ ಈ ಪ್ರಶ್ನೆಯನ್ನು ಕೇಳಲಾಯಿತು)

**ಪ್ರಶ್ನೆ 3 :** ಇಂತಹ ವಿಶೇಷ ಅಗತ್ಯಗಳುಳ್ಳ ಮಕ್ಕಳಿಗೆ ಶಿಕ್ಷಣ ಕೊಡುವ ಬಗ್ಗೆ ನಿಮ್ಮ ನಿಲುವೇನು?

**ಪ್ರಶ್ನೆ 4 :** ವಿಶೇಷ ಅಗತ್ಯಗಳುಳ್ಳ ಮಕ್ಕಳ ಭವಿಷ್ಯದ ಬಗ್ಗೆ ನಿಮಗೆ ಏನನ್ನಿಸುತ್ತದೆ? ಅವರಿಗೆ ಯಾವ ರೀತಿಯ ಅವಕಾಶಗಳು ಬೇಕಾಗುತ್ತವೆ?

## ಇ. ತರಗತಿ ವೀಕ್ಷಣೆಯಲ್ಲಿ ಗಮನಿಸಲಾದ ಅಂಶಗಳು

ಸಾಮಾನ್ಯವಾಗಿ ಯಾವುದೇ ಮಗುವಿನ ಬೆಳವಣಿಗೆಯ ಬಗ್ಗೆ ಶಿಕ್ಷಕರಲ್ಲಿ ಧನಾತ್ಮಕ/ಋಣಾತ್ಮಕ ಅಭಿಪ್ರಾಯಗಳು ಬರುವುದು ಸಹಜ. ಆದರೆ ಅವರ ಹೇಳಿಕೆಗಳು ಮತ್ತು ಅದಕ್ಕೆ ಪೂರಕ ಪ್ರಕ್ರಿಯೆಗಳು ನಡೆಯುತ್ತಿರುವುದನ್ನು ತಿಳಿಯಬೇಕಾದರೆ ತರಗತಿಯ

ಭೌತಿಕ ಪರಿಸರ ಹಾಗೂ ತರಗತಿ ಪ್ರಕ್ರಿಯೆಯನ್ನು ವೀಕ್ಷಣೆ ಮಾಡುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ಪ್ರಸ್ತುತ ತರಗತಿ ಸನ್ನಿವೇಶ, ಭೌತಿಕ ಪರಿಸರಗಳನ್ನು ಗಮನಿಸಲು ಈ ಕೆಳಗಿನ ಕೆಲವು ಅಂಶಗಳನ್ನು ಆಧಾರವಾಗಿರಿಸಿಕೊಳ್ಳಲಾಯಿತು.

- ಮಗುವಿನ ಅಗತ್ಯಕ್ಕೆ ಸ್ಪಂದಿಸುವ ರೀತಿಗೆ ಸಂಬಂಧಿಸಿದಂತೆ ತರಗತಿಯಲ್ಲಿ ವಿಶೇಷ ಅಗತ್ಯಗಳನ್ನು ನಿರ್ಮಿಸಲಾಗಿದೆಯೆ? ಉದಾಹರಣೆಗೆ: ದೈಹಿಕ ನ್ಯೂನತೆ ಇರುವ ಮಗು ತರಗತಿಗೆ ಪ್ರವೇಶಿಸಲು ಅಗತ್ಯ ಇಳಿಜಾರು, ಮಗುವಿಗೆ ಕುಳಿತುಕೊಳ್ಳಲು ಸೂಕ್ತವಾದ ಆಸನದ ವ್ಯವಸ್ಥೆ, ವಿಶೇಷವಾದ ಶೌಚಾಲಯದ ವ್ಯವಸ್ಥೆ, ಕಲಿಕೆಗೆ ಪೂರಕವಾಗುವ ಕಲಿಕಾ ಸಾಧನಗಳ ವ್ಯವಸ್ಥೆ ಇತ್ಯಾದಿ.
- ಪಾಠ ವೀಕ್ಷಣೆಯ ಸಂದರ್ಭದಲ್ಲಿ ಮಗುವಿನ ಅಗತ್ಯಕ್ಕೆ ತಕ್ಕಂತೆ ಕುಳಿತುಕೊಳ್ಳುವ ಸ್ಥಳ, ಇತರೆ ಸಹಪಾಠಿಗಳ ಸಹಕಾರ, ಬಳಸುವ ಭಾಷೆ, ಮುಂತಾದವುಗಳು ಮಗುವಿನ ಕಲಿಕೆಗೆ ಪೂರಕವಾಗಿವೆಯೆ ಎಂಬುದನ್ನು ಗಮನಿಸುವುದು.

ಈ ಮೂಲಕ ಶಿಕ್ಷಕರ ಅಭಿಪ್ರಾಯಗಳಿಗೂ ವಾಸ್ತವ ಸನ್ನಿವೇಶಕ್ಕೂ ಎಷ್ಟರ ಮಟ್ಟಿಗೆ ತಾಳೆಯಾಗುತ್ತಿದೆ ಎಂಬುದನ್ನು ಹೋಲಿಸಿ ನೋಡಿಕೊಳ್ಳಲು ಸಾಧ್ಯತೆಯನ್ನು ಸೃಷ್ಟಿಸಿಕೊಳ್ಳಲಾಯಿತು.

ಈ ಮೇಲಿನ ಪ್ರಕ್ರಿಯೆಗಳ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿ ಪ್ರಸ್ತುತ ಸನ್ನಿವೇಶವನ್ನು ಈ ಕೆಳಗಿನಂತೆ ಅರ್ಥಮಾಡಿಕೊಳ್ಳಬಹುದಾಗಿದೆ.

## ಅ. ಶಿಕ್ಷಕರಿಂದ ಪಡೆದ ಪ್ರತಿಕ್ರಿಯೆಗಳ ವಿಶ್ಲೇಷಣೆ

**ಪ್ರಶ್ನೆ 1 :** ಮಗುವಿಗೆ ತನ್ನನ್ನು ದೂರ ಮಾಡುತ್ತಿದ್ದಾರೆ ಎನ್ನುವ ಭಾವನೆ ಬಾರದಿರುವ ಹಾಗೆ ಮಾಡಲು ನೀವು ಏನಾದರೂ ಪ್ರಕ್ರಿಯೆ ಅಳವಡಿಸಿಕೊಂಡಿದ್ದೀರಾ?

ಒಟ್ಟು 19 ಶಿಕ್ಷಕರಲ್ಲಿ ಶೇ.75ರಷ್ಟು ಶಿಕ್ಷಕರು "ತರಗತಿಯಲ್ಲಿ ಈ ಬಗ್ಗೆ ಚರ್ಚಿಸುತ್ತೇವೆ. ಎಲ್ಲಾ ಮಕ್ಕಳಿಗೂ ಈ ರೀತಿಯ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುತ್ತೇವೆ, ನ್ಯೂನತೆಗಳು ಮಾನವ ಸಹಜವಾದವುಗಳು ಮತ್ತು ಅದಕ್ಕೆ ಎಲ್ಲರೂ ಸ್ಪಂದಿಸಬೇಕು ಮತ್ತು ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡಬೇಕು ಎಂಬ ಅಂಶಗಳನ್ನು ಚರ್ಚಿಸುತ್ತಿರುತ್ತೇವೆ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇವರಲ್ಲಿ ಶೇ.63ರಷ್ಟು ಶಿಕ್ಷಕರು "ಈ ಮಕ್ಕಳಿಗೆ ಇತರೆ ಮಕ್ಕಳೊಂದಿಗೆ ಬೆರೆಯುವ ರೀತಿಯಲ್ಲಿ ಚಟುವಟಿಕೆಗಳನ್ನು ರೂಪಿಸುತ್ತೇವೆ" ಎಂದು ತಿಳಿಸಿರುತ್ತಾರೆ. ಅಲ್ಲದೆ ಶೇ.38ರಷ್ಟು ಶಿಕ್ಷಕರು "ತರಗತಿಯಲ್ಲಿನ ಕಲಿಕಾ/ಚರ್ಚೆಯ ಸಂದರ್ಭದಲ್ಲಿ ಮಗುವಿನ ಅಗತ್ಯಕ್ಕೆ ತಕ್ಕಂತೆ ಮತ್ತೊಮ್ಮೆ ಪ್ರತ್ಯೇಕವಾಗಿ ಹೇಳುವ, ಕೇಳುವ ಪ್ರಕ್ರಿಯೆ ನಡೆಸುತ್ತೇವೆ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇ.7ರಷ್ಟು ಶಿಕ್ಷಕರಿಗೆ ತಮ್ಮ ತರಗತಿಯಲ್ಲಿರುವ ಮಕ್ಕಳಿಗೆ ಈ ರೀತಿಯ ಸಮಸ್ಯೆ ಇರುವುದೇ ಗಮನಕ್ಕೆ ಬಂದಿಲ್ಲ.

ಈ ಮೊದಲ ಪ್ರಶ್ನೆಗೆ ಬಂದಿರುವ ಅಭಿಪ್ರಾಯಗಳ ಪ್ರಕಾರ ಹೆಚ್ಚಿನ ಶಿಕ್ಷಕರಿಗೆ ಈ ರೀತಿಯ ಮಕ್ಕಳಿಗೆ ಹೆಚ್ಚಿನ ಆತ್ಮವಿಶ್ವಾಸ ತುಂಬಬೇಕು ಮತ್ತು ಅದಕ್ಕಾಗಿ ನಾವಷ್ಟೇ ಪ್ರಯತ್ನ ಮಾಡಿದರೆ ಸಾಲದು ಉಳಿದ ಮಕ್ಕಳಿಗೂ ಇದರ ಅರಿವು ಮೂಡಿಸುವ

ಮೂಲಕ ಸಹಕಾರ ದೊರೆಯುವಂತೆ ಮಾಡಬೇಕು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಹೇಳಿಕೆಗೆ ಪೂರಕವಾಗುವಂತೆ ಹೆಚ್ಚಿನ ತರಗತಿಗಳಲ್ಲಿ ಇತರೆ ಮಕ್ಕಳು ಈ ಮಕ್ಕಳನ್ನು ಸಾಮಾನ್ಯರಂತೆಯೇ ಮಾತನಾಡಿಸುವ, ಹೊರಗೆ ಹೋಗಬೇಕಾದ, ನಿಲ್ಲಬೇಕಾದ, ಕೂರಬೇಕಾದ ಮುಂತಾದ ಸಂದರ್ಭಗಳಲ್ಲಿ ಇತರೆ ಮಕ್ಕಳು ಸಹಾಯ ಮಾಡುತ್ತಿದ್ದುದನ್ನು ಗಮನಿಸಲಾಯಿತು.

**ಪ್ರಶ್ನೆ 2** : ಮಗುವನ್ನು ಪರಿಣಾಮಕಾರಿಯಾಗಿ ತರಗತಿಯ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ನೀವು ಯಾವ ರೀತಿಯ ಪ್ರಕ್ರಿಯೆಗಳನ್ನು ಅನುಸರಿಸುತ್ತಿದ್ದೀರಿ?

ಈ ಮೇಲಿನ ಪ್ರಶ್ನೆಗೆ ಶೇ.63ರಷ್ಟು ಶಿಕ್ಷಕರು "ಮಗುವಿನ ಅಗತ್ಯಕ್ಕೆ ತಕ್ಕ ಹಾಗೆ ಕುಳಿತುಕೊಳ್ಳುವ ಆಸನದ ವ್ಯವಸ್ಥೆ, ಅಗತ್ಯ ಸಾಮಗ್ರಿಗಳನ್ನು ಒದಗಿಸಿದ್ದೇವೆ. ಅಂದರೆ ತರಗತಿಯಲ್ಲಿ ಮುಂದೆ ಕುಳಿತುಕೊಳ್ಳಲು ಅವಕಾಶ ಮಾಡಿದ್ದೇವೆ" ಎಂದು ಹೇಳುತ್ತಾರೆ. ಹೇಳಿಕೆಗಳಿಗೆ ಪೂರಕವಾದ ವಾತಾವರಣಗಳು ತರಗತಿಯಲ್ಲಿ ಇದೆ ಎನಿಸಿದರೂ ಬಹುತೇಕ ಶಾಲೆಗಳಲ್ಲಿ ಈ ಮಕ್ಕಳ ಅನುಕೂಲಕ್ಕೆ ತಕ್ಕ ಸೂಕ್ತ ವ್ಯವಸ್ಥೆಗಳಿಲ್ಲದಿರುವುದು ಕಂಡುಬಂದಿತು. ಉದಾಹರಣೆಗೆ: ಕುಬ್ಜ ಮಗುವಿಗೆ ಡೆಸ್ಕ್‌ನ ಕೊನೆಯ ಭಾಗದಲ್ಲಿ ಕೂರಲು ಅವಕಾಶವನ್ನು ಮಾಡಿಕೊಡಲಾಗಿದೆ; ಆದರೆ ಈ ಮಗು ಸಾಮಾನ್ಯ ಮಕ್ಕಳು ಕೂರುವ ಡೆಸ್ಕ್‌ನ ಮೇಲೆ ಕೂರಬೇಕು. ಆದರೆ ಈ ಡೆಸ್ಕ್‌ಗಳು ಎತ್ತರವಾಗಿದ್ದು ವಿಶೇಷ ಶ್ರಮ ಹಾಕಿ ಮೇಲೆ ಹತ್ತಿ ಕೂರಬೇಕಾಗುತ್ತದೆ. ದೃಷ್ಟಿದೋಷವಿರುವ ಮಕ್ಕಳಿಗೆ ಮುಂದೆ ಕುಳಿತುಕೊಳ್ಳಲು ಅವಕಾಶ ಮಾಡಿಕೊಡಲಾಗಿದೆಯಾದರೂ ಆ ಮಕ್ಕಳಿಗೆ ಅಗತ್ಯವಿರುವ, ಬೋರ್ಡಿನ ಎತ್ತರಕ್ಕೆ ಹೊಂದುವ ರೀತಿಯ ಆಸನಗಳ ವ್ಯವಸ್ಥೆಯಿರುವುದಿಲ್ಲ. ನಲಿಕಲಿ ಮಟ್ಟದ ಬಹುತೇಕ ಮಕ್ಕಳು ನೆಲದಲ್ಲಿ ಕೂರುವುದರಿಂದ ಅವರಿಗೆ ಸೂಕ್ತವಾಗುವಂತೆ ಕೂರಲು ಸಾಧ್ಯವಾಗುತ್ತದೆ. ಆದರೆ ಕಲಿಕೆಯ ಸಂದರ್ಭದಲ್ಲಿ ಅಗತ್ಯಕ್ಕೆ ತಕ್ಕಂತೆ ಎದ್ದು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಓಡಾಡಲು ಕಷ್ಟವಾಗುತ್ತದೆ. ಈ ಶಾಲೆಗಳಲ್ಲಿ ಈ ಮಕ್ಕಳಿಗೆ ಸುಲಭವಾಗಿ ಬಳಸಲು ಯೋಗ್ಯವಾದ ಶೌಚಾಲಯದ ವ್ಯವಸ್ಥೆ, ಮಗುವಿನ ಎತ್ತರಕ್ಕೆ ನಿಲುಕುವ ಕುಡಿಯುವ ನೀರಿನ ವ್ಯವಸ್ಥೆ ಮುಂತಾದವುಗಳಿಲ್ಲದಿರುವುದು ಕಂಡುಬರುತ್ತದೆ. ಈ 20 ಶಿಕ್ಷಕರಲ್ಲಿ ಶೇ.19ರಷ್ಟು ಶಿಕ್ಷಕರು ಮಗುವಿನ ಪಾಲಕರಿಗೆ ಮಗುವಿನ ಅಗತ್ಯಗಳ ಬಗ್ಗೆ ಮನವರಿಕೆ ಮಾಡಿಕೊಡುತ್ತೇವೆ ಮತ್ತು ಪೂರೈಸಲು ಬೇಕಾಗಿರುವ ಸೌಲಭ್ಯಗಳನ್ನು ಕೊಡಿಸಲು ತಿಳಿ ಹೇಳಿದ್ದೇವೆ ಎಂದು ಉತ್ತರಿಸಿದ್ದಾರೆ. ಆದರೆ ಎಲ್ಲಾ ಶಿಕ್ಷಕರೂ ಈ ನಿಟ್ಟಿನಲ್ಲಿ ಪಾಲಕರಿಗೆ ಮನವೊಲಿಸುವ ಕೆಲಸ ಮಾಡಬೇಕೆಂಬುದು ಗಮನಿಸಬೇಕಾದ ಅಂಶವಾಗಿದೆ.

ಇದೇ ಸಂದರ್ಭದಲ್ಲಿ ಶೇ.25ರಷ್ಟು ಶಿಕ್ಷಕರು ಈ ಮಕ್ಕಳನ್ನು "ಸಾಮಾನ್ಯ ಮಕ್ಕಳಂತೆ ನೋಡುತ್ತೇವೆ ಮತ್ತು ಇವರಿಗಾಗಿ ವಿಶೇಷ ಪ್ರಯತ್ನ ಮಾಡುವ ಅಗತ್ಯವಿಲ್ಲ" ಎಂಬ ಅಭಿಪ್ರಾಯವನ್ನು ಹೇಳುತ್ತಾರೆ. ಆದರೆ ಪ್ರತಿ ಮಗುವಿನ ಸಾಮರ್ಥ್ಯ, ಅವಶ್ಯಕತೆಗಳಿಗೆ ಅನುಗುಣವಾಗಿ ತರಗತಿಯಲ್ಲಿ ಕಲಿಕಾ ವಾತಾವರಣವನ್ನು ಸೃಷ್ಟಿಸಬೇಕೆಂಬುದು ವಾಸ್ತವಿಕ ಅಗತ್ಯವಾಗಿದೆ.

**ಪ್ರಶ್ನೆ 3 :** ಇಂತಹ ವಿಶೇಷ ಅಗತ್ಯತೆಗಳುಳ್ಳ ಮಕ್ಕಳಿಗೆ ಶಿಕ್ಷಣ ಕೊಡುವ ಬಗ್ಗೆ ನಿಮ್ಮ ನಿಲುವೇನು?

ಈ ಪ್ರಶ್ನೆಗೆ ಶೇ.83ರಷ್ಟು ಶಿಕ್ಷಕರು "ಎಲ್ಲಾ ಮಕ್ಕಳೂ ಮಕ್ಕಳೇ, ಎಲ್ಲರಿಗೂ ಅವರವರ ಮಟ್ಟಿಗೆ ಸಾಮರ್ಥ್ಯವಿರುತ್ತದೆ. ಸಮಾಜದಲ್ಲಿ ಎಲ್ಲರಿಗೂ ಬದುಕಲು ಅವಕಾಶವಿದೆ ಮತ್ತು ಬದುಕು ಕಟ್ಟಿಕೊಳ್ಳಲು ಬೇಕಾದ ವ್ಯವಸ್ಥೆಗಳಿವೆ. ಅದಕ್ಕೆ ಪೂರಕವಾದ ಅವಕಾಶಗಳನ್ನು ಒದಗಿಸುತ್ತಾ ಹೋದರೆ ಸಾಕು. ನಾವು ಮಾಡಬೇಕಾಗಿರುವ ಕರ್ತವ್ಯ ಅದೇ ಆಗಿರಬೇಕು" ಎಂದು ಹೇಳಿರುವುದು ಧನಾತ್ಮಕ ಅಂಶವಾಗಿದೆ.

ಆದಾಗ್ಯೂ ಶೇ.13ರಷ್ಟು ಶಿಕ್ಷಕರು ಈ ಮಕ್ಕಳಿಂದಾಗಿ ಇತರ ಸಾಮಾನ್ಯ ಮಕ್ಕಳತ್ತ ಗಮನ ಹರಿಸಲು ಸಾಧ್ಯವಾಗುತ್ತಿಲ್ಲ, ಇವರಿಂದಾಗಿ ತರಗತಿಯಲ್ಲಿ ತುಂಬಾ ಗಲಾಟೆ ಗೊಂದಲ ಗಳಿರುತ್ತವೆ. ತರಗತಿ ನಿರ್ವಹಣೆ ಕಷ್ಟ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರೆ; ಶೇ.13ರಷ್ಟು ಶಿಕ್ಷಕರಿಗೆ "ಮಗುವಿಗೆ ಈ ರೀತಿಯ ಸಮಸ್ಯೆ ಇರುವುದೇ ನಮಗೆ ತಿಳಿದಿರುವುದಿಲ್ಲ. ಆದ್ದರಿಂದ ಬೇರೆ ರೀತಿಯ ಪ್ರಯತ್ನ ಮಾಡಿಲ್ಲ" ಎಂಬ ಹೇಳಿಕೆಯನ್ನು ನೀಡುತ್ತಾರೆ.

ಇಲ್ಲಿ ನಿರೀಕ್ಷೆಯಿರುವುದು ಎಲ್ಲಾ ಮಕ್ಕಳನ್ನೂ ಅವರವರ ಸಾಮರ್ಥ್ಯ ಹಾಗೂ ಮಿತಿಗಳನ್ನು ಅರಿತು ತರಗತಿ ಸಂಯೋಜನೆ ಮಾಡಬೇಕು ಮತ್ತು ಕಲಿಕೆಗೆ ಅವಕಾಶ ಮಾಡಿಕೊಡಬೇಕೆಂಬ ಅರಿವಿನ ಅಗತ್ಯ ಬೇಕಾಗಿರುವುದು ಈ ಮೇಲಿನ 2 ಸಂದರ್ಭಗಳಲ್ಲಿಯೂ ಕಾಣುತ್ತದೆ.

**ಪ್ರಶ್ನೆ 4 :** ವಿಶೇಷ ಅಗತ್ಯಗಳುಳ್ಳ ಮಕ್ಕಳ ಭವಿಷ್ಯದ ಬಗ್ಗೆ ನಿಮಗೆ ಏನನ್ನಿಸುತ್ತದೆ? ಅವರಿಗೆ ಈ ಯಾವ ರೀತಿಯ ಅವಕಾಶಗಳು ಬೇಕಾಗುತ್ತವೆ?

ಈ ವಿಷಯಕ್ಕೆ ಸಂಬಂಧಿಸಿದಂತೆ ಶೇ.75ರಷ್ಟು ಶಿಕ್ಷಕರು ಈ ಮಕ್ಕಳ ಅಗತ್ಯಕ್ಕೆ ತಕ್ಕ ಶಿಕ್ಷಣ ಸಂಸ್ಥೆಗಳನ್ನು ಹುಡುಕಿ ಅವರಿಗೆ ಅವಕಾಶಗಳನ್ನು ಕಲ್ಪಿಸಬೇಕು. ಅವರಿಗೂ ಸಾಕಷ್ಟು ಅವಕಾಶಗಳಿವೆ. ಅದನ್ನು ಸದುಪಯೋಗ ಪಡಿಸಿಕೊಳ್ಳಲು ದಾರಿ ಮಾಡಿಕೊಡಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಇವರಲ್ಲಿ ಶೇ.69 ರಷ್ಟು ಶಿಕ್ಷಕರು ಅವರ ಸಮಸ್ಯೆಗಳನ್ನು ನಿರಂತರವಾಗಿ ಗುರುತಿಸಿ ಅವರಿಗೆ ಸೂಕ್ತವಾದ ಅವಕಾಶಗಳನ್ನು ಒದಗಿಸಿದರೆ ಅವರೂ ನಮ್ಮಂತೆಯೇ ಜೀವನ ನಡೆಸಲು ಸಾಧ್ಯ ಎನ್ನುತ್ತಾರೆ.

ಇಲ್ಲಿ ಬಹುತೇಕ ಶಿಕ್ಷಕರು ಮಗುವಿನ ಅಗತ್ಯವನ್ನು ಗುರುತಿಸಬೇಕು, ಪೂರಕ ಅವಕಾಶಗಳನ್ನು ಒದಗಿಸಬೇಕು ಎಂದು ಅಭಿಪ್ರಾಯ ತಳೆದಿರುವುದು ಧನಾತ್ಮಕ ಅಂಶವಾಗಿ ಕಂಡುಬರುತ್ತದೆ. ಆದರೆ ಈ ಮಕ್ಕಳು ಶಾಲಾ ಸನ್ನಿವೇಶದಲ್ಲಿಯೇ ಕಲಿಯಲು ಅರ್ಹರು ಎಂಬುದನ್ನು ಒಪ್ಪಲು ಇವರಿಗೆ ಸಾಧ್ಯವಾಗುತ್ತಿಲ್ಲ. ಅವರೇ ಹೇಳುವಂತೆ ಈ ಮಕ್ಕಳಿಗೆ ಕಲಿಸಲು ವಿಶೇಷ ತರಬೇತಿಯ ಅವಶ್ಯಕತೆಯಿದೆ. ಹಾಗೂ ಅದಕ್ಕೆ ತಕ್ಕಂತೆ ಪೂರಕ ಸಾಮಗ್ರಿಗಳು ಬೇಕಾಗುತ್ತವೆ. ಇವುಗಳನ್ನು ಶಾಲೆಗಳಲ್ಲಿ ಒದಗಿಸುವುದು ಕಷ್ಟ ಮತ್ತು ಈ ಮಕ್ಕಳಿಗೆ ಪ್ರತ್ಯೇಕವಾಗಿ ಕಲಿಸುತ್ತಿದ್ದರೆ ಬೇರೆ ಮಕ್ಕಳತ್ತ ಗಮನ ಹರಿಸಲು ಸಾಧ್ಯವಾಗುವುದಿಲ್ಲ ಎಂಬ ಕಾಳಜಿ ಮತ್ತು ಅಸಹಾಯಕತೆಯನ್ನು ಹೇಳಿಕೊಳ್ಳುತ್ತಾರೆ. ಹೀಗಾಗಿಯೇ ಈ ಮಕ್ಕಳ ಕಲಿಕೆಗೆ ಬೇರೆ ರೀತಿಯ ಪ್ರಯತ್ನ ಮಾಡಿಲ್ಲ ಎಂಬುದು ಹೆಚ್ಚಿನ ಶಿಕ್ಷಕರ ಅಭಿಪ್ರಾಯವಾಗಿದೆ.

## ಆ. ಪಾಲಕರಿಂದ ಪಡೆದ ಅಭಿಪ್ರಾಯಗಳ ವಿಶ್ಲೇಷಣೆ

ಇನ್ನು ವಿಶೇಷ ಅಗತ್ಯವುಳ್ಳ ಮಕ್ಕಳ ಪಾಲನೆ, ಸಮಾಜಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಮಾಡುವ ತಯಾರಿ, ಈ ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಹಾಗೂ ಅವರ ಭವಿಷ್ಯದ ಬಗ್ಗೆ ಪಾಲಕರ ಆಲೋಚನೆಗಳೇನು? ಎಂಬ ಅಂಶಗಳ ಬಗ್ಗೆ ತಿಳಿಯಲು 16 ವಿಶೇಷ ಅಗತ್ಯಗಳುಳ್ಳ ಮಕ್ಕಳ ಪಾಲಕರನ್ನು ಆಯ್ಕೆ ಮಾಡಿಕೊಂಡು ಅವರ ಸಂದರ್ಶನ ಮಾಡಲಾಯಿತು. ಈ ಸಂದರ್ಶನದಲ್ಲಿ ತಿಳಿದು ಬಂದ ಅಂಶಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದಾಗಿದೆ.

**ಪ್ರಶ್ನೆ 1 :** ಮೊದಲನೇ ಪ್ರಶ್ನೆಯು ಈ ಮಗುವಿನ ಪಾಲನೆ ಮತ್ತು ಪೋಷಣೆಗೆ ಸಂಬಂಧಿಸಿದ್ದಾಗಿದೆ ಮತ್ತು ಈ ಪ್ರಶ್ನೆಗೆ ಶೇ.50ರಷ್ಟು ಹೆಚ್ಚಿನ ಪಾಲಕರು ಶಿಕ್ಷಕರು "ಈ ಮಗು ನಮ್ಮ ನಿತ್ಯದ ಬದುಕು, ನಮ್ಮ ಕರ್ತವ್ಯ, ಬೆಳಗ್ಗೆಯಿಂದ ಸಂಜೆಯವರೆಗೆ ಒಬ್ಬರು ಸದಾ ಆರೈಕೆ ಮಾಡಲೇಬೇಕು, ಖುಷಿಯಿಂದಲೇ ನೋಡಿಕೊಳ್ಳುತ್ತೇವೆ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಶೇ.25ರಷ್ಟು ಪಾಲಕರಿಗೆ ಮಗುವಿಗೆ ಈ ರೀತಿಯ ಸಮಸ್ಯೆ ಇರುವುದು ನಮಗೆ ತಿಳಿದಿಲ್ಲ. ಆದ್ದರಿಂದ ಬೇರೆ ರೀತಿಯ ಯಾವುದೇ ಪ್ರಯತ್ನಗಳನ್ನು ಮಾಡಿಲ್ಲ ಎನ್ನುತ್ತಾರೆ. ಈ ಮಕ್ಕಳು ಹೆಚ್ಚು ದೃಷ್ಟಿದೋಷವನ್ನು ಹೊಂದಿರುವ ಮಕ್ಕಳಾಗಿದ್ದಾರೆ. ಅಲ್ಲದೆ ಶೇ.19ರಷ್ಟು ಪಾಲಕರು "ನಾವು ಎಷ್ಟು ಅಂತ ಮಾಡೋದು, ಪ್ರತಿದಿನ ಈ ಮಗುವಿನ ಹಿಂದೆಯೇ ನಿಂತಿರಬೇಕು. ನಮಗೂ ಸಾಕಾಗಿದೆ" ಎಂಬುದಾಗಿ ಹೇಳಿದರೆ, "ನಮ್ಮ ದುರಾದೃಷ್ಟ ಈ ಅನಗತ್ಯ ಮಗು ನಮ್ಮ ಮನೆಯಲ್ಲಿ ಹುಟ್ಟಿದೆ. ಇಂತಹ ಮಕ್ಕಳು ಹುಟ್ಟಬಾರದು. ನಮಗಂತೂ ನರಕವಾಗಿದೆ. ಜನ ಕೇವಲವಾಗಿ ನೋಡುತ್ತಾರೆ" ಎಂಬುದಾಗಿ ಶೇ.19ರಷ್ಟು ಪಾಲಕರು ನೋವು ತೋಡಿಕೊಳ್ಳುವಂತೆ ಹೇಳುತ್ತಾರೆ. ಆದರೆ ಶೇ.13ರಷ್ಟು ಪಾಲಕರು "ನಮ್ಮ ಮಗು ತಾನೇ ತನ್ನ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುತ್ತದೆ, ನಮಗೇನೂ ಸಮಸ್ಯೆ ಇಲ್ಲ" ಎಂದರೆ "ಈ ಮಗು ಹುಟ್ಟಿದ ಮೇಲೆ ನಮಗೆ ಅದೃಷ್ಟ ಹೆಚ್ಚಾಯಿತು ಅದಕ್ಕಾಗಿಯಾದರೂ ಚೆನ್ನಾಗಿ ನೋಡಿಕೊಳ್ಳಬೇಕು. ನೋಡಿಕೊಳ್ಳುತ್ತಿದ್ದೇವೆ" ಎಂಬ ಅಭಿಪ್ರಾಯವನ್ನು ಶೇ.7ರಷ್ಟು ಪಾಲಕರು ತಿಳಿಸುತ್ತಾರೆ.

ಈ ನಡುವೆ ಶೇ.6ರಷ್ಟು ಪಾಲಕರು ಮಾತ್ರ "ನಮ್ಮ ಮಗುವಿಗೆ ಸ್ನಾನ ಮಾಡಲು ಸಹಕರಿಸಬೇಕು, ಬೆಳಗ್ಗೆ ತಿಂಡಿ ತಿನ್ನಿಸಿ ಶಾಲೆಗೆ ಬಿಟ್ಟು ಬರುತ್ತೇವೆ, ಶಾಲೆಯಲ್ಲಿ ಶಿಕ್ಷಕರಿಗೆ ಪ್ರೀತಿಯಿಂದ ನೋಡಿಕೊಳ್ಳಲು ಕೇಳಿಕೊಂಡಿದ್ದೇವೆ, ಶಾಲೆ ಮುಗಿದ ನಂತರ ನಾವೇ ಹೋಗಿ ಕರೆದುಕೊಂಡು ಬರುತ್ತೇವೆ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಒಟ್ಟಾರೆಯಾಗಿ ಶೇ.50ರಷ್ಟು ಪಾಲಕರು "ಈ ಮಗು ನಮ್ಮ ನಿತ್ಯದ ಬದುಕು, ನಮ್ಮ ಕರ್ತವ್ಯ ಬೆಳಗ್ಗೆಯಿಂದ ಸಂಜೆಯವರೆಗೆ ಒಬ್ಬರು ಸದಾ ಆರೈಕೆ ಮಾಡಲೇಬೇಕು, ಖುಷಿಯಿಂದಲೇ ನೋಡಿಕೊಳ್ಳುತ್ತೇವೆ" ಹಾಗೂ "ನಮ್ಮ ಮಗುವಿಗೆ ಸ್ನಾನ ಮಾಡಲು ಸಹಕರಿಸಬೇಕು, ಬೆಳಗ್ಗೆ ತಿಂಡಿ ತಿನ್ನಿಸಿ ಶಾಲೆಗೆ ಬಿಟ್ಟು ಬರುತ್ತೇವೆ, ಶಾಲೆಯಲ್ಲಿ ಶಿಕ್ಷಕರಿಗೆ ಪ್ರೀತಿಯಿಂದ ನೋಡಿಕೊಳ್ಳಲು ಕೇಳಿಕೊಂಡಿದ್ದೇವೆ, ಶಾಲೆ ಮುಗಿದ ನಂತರ ನಾವೇ

ಹೋಗಿ ಕರೆದುಕೊಂಡು ಬರುತ್ತೇವೆ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿರುವುದು ಧನಾತ್ಮಕ ಅಂಶವಾಗಿದೆ. ಆದರೆ ಕೆಲವರು ಈ ಮಗು ಹುಟ್ಟಿದ ಮೇಲೆ ನಮಗೆ ಅದೃಷ್ಟ ಬಂದಿತು ಅದಕ್ಕಾಗಿ ಪಾಲನೆ ಮಾಡುತ್ತೇವೆ ಎಂಬುದು ಧನಾತ್ಮಕವಾದರೂ ಯೋಚಿಸಬೇಕಾದ ಅನಿವಾರ್ಯತೆಯಿರುವ ವಿಚಾರವಾಗಿದೆ. ಇಲ್ಲಿ ಹೆಚ್ಚು ಯೋಚಿಸಬೇಕಾಗಿರುವುದು "ನಾವು ಎಷ್ಟೂ ಅಂತ ಮಾಡೋದು, ಪ್ರತಿದಿನ ಈ ಮಗುವಿನ ಹಿಂದೆಯೇ ನಿಂತಿರಬೇಕು ನಮಗೂ ಸಾಕಾಗಿದೆ" ಎಂದು ಹೇಳುವ ಹಾಗೂ "ನಮ್ಮ ದುರಾದೃಷ್ಟ ಈ ಅನಗತ್ಯ ಮಗು ನಮ್ಮ ಮನೆಯಲ್ಲಿ ಹುಟ್ಟಿದೆ. ಇಂತಹ ಮಕ್ಕಳು ಹುಟ್ಟಬಾರದು. ನಮಗಂತೂ ನರಕವಾಗಿದೆ. ಜನ ಕೇವಲವಾಗಿ ನೋಡುತ್ತಾರೆ" ಎಂಬುದಾಗಿ ನೋವು ತೋಡಿಕೊಳ್ಳುವ ಪಾಲಕರ ಬಗ್ಗೆ ಇವರಿಗೆ ಮಗುವಿನ ಬಗ್ಗೆ ನಿರಾಸಕ್ತಿ ಮತ್ತು ಉದಾಸೀನತೆ ಇರುವುದು ಕಂಡುಬರುತ್ತದೆ. ಇಂತಹ ಪಾಲಕರಿಗೆ ಮಾನವತ್ವ ಹಾಗೂ ಜೀವನದ ಕರ್ತವ್ಯದ ಬಗ್ಗೆ ತರಬೇತಿಗಳನ್ನು ನೀಡಿ ಅವರ ಮನಸ್ಸು ಪರಿವರ್ತನೆ ಮಾಡಬೇಕಾಗಿರುವುದು ಅನಿವಾರ್ಯವಾಗಿದೆ.

**ಪ್ರಶ್ನೆ 2 :** ನಿಮ್ಮ ಮಗುವಿಗೆ ಸಮಾಜದ ಜೊತೆ ಹೊಂದಾಣಿಕೆಗಾಗಿ ಹಾಗೂ ದಿನನಿತ್ಯದ ಚಟುವಟಿಕೆಗಳನ್ನು/ನಿತ್ಯಕರ್ಮಗಳನ್ನು ಸ್ವತಃ ನೋಡಿಕೊಳ್ಳಲು ಹೇಗೆ ತಯಾರಿ ಮಾಡುತ್ತಿದ್ದೀರಿ?

ಶೇ.56ರಷ್ಟು ಪಾಲಕರು "ನಮ್ಮ ಜೊತೆ ನಿತ್ಯ ಕೆಲಸದಲ್ಲಿ ತೊಡಗಿಕೊಳ್ಳುವಂತೆ ನೋಡಿಕೊಂಡಿದ್ದೇವೆ. ಉದಾ: ಅಂಗಡಿಗೆ ಕಳುಹಿಸುವುದು, ಡೈರಿಗೆ ಕಳುಹಿಸಿ ವ್ಯವಹಾರ ಮಾಡಿಸುವುದು ಇತ್ಯಾದಿ ರೀತಿಯಲ್ಲಿ ತೊಡಗಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ." "ನಮ್ಮ ಮಗು ತುಂಬಾ ಬುದ್ಧಿವಂತ, ತಾನೇ ಬುದ್ಧಿವಾದ ಹೇಳುತ್ತಾನೆ/ಳೆ, ಒಳ್ಳೆಯ ಗುಣವಂತ ಮಗುವಾದ್ದರಿಂದ ಊರಿನಲ್ಲಿ ಎಲ್ಲರಿಗೂ ಅಚ್ಚುಮೆಚ್ಚು" ಎಂಬ ಅಭಿಪ್ರಾಯವು ಮಗುವನ್ನು ಸಮಾಜಮುಖಿಯನ್ನಾಗಿ ಮಾಡುವಲ್ಲಿ ಪಾಲಕರು ಸಾಕಷ್ಟು ಪ್ರಯತ್ನ ಮಾಡುತ್ತಿರುವುದು ಕಂಡುಬರುತ್ತದೆ. ಹಾಗೆಯೇ ಶೇ.56ರಷ್ಟು ಪಾಲಕರು "ನಾವು ನಮ್ಮ ಮಗುವಿಗೆ ನಿರಂತರವಾಗಿ ವೈದ್ಯಕೀಯ ತಪಾಸಣೆ ಮಾಡಿಸುತ್ತೇವೆ. ಥೆರಪಿಗಳನ್ನು ಮಾಡಿಸುತ್ತಿದ್ದೇವೆ" ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಶೇ.44ರಷ್ಟು ಪಾಲಕರು "ಈ ಮಗು ಎಲ್ಲರಂತೆ ಬದುಕೋದು ಕಷ್ಟ. ಸದಾ ನಮ್ಮ ಕೆಲಸ ಬಿಟ್ಟು ಒಬ್ಬರಲ್ಲಾ ಒಬ್ಬರು ಈ ಮಗುವಿನ ಜೊತೆ ನಿಂತಿರಬೇಕು. ನಾವು ಎಷ್ಟೂ ಅಂತ ಮಾಡೋದು, ನಮಗೂ ಸಾಕಾಗಿದೆ" ಎನ್ನುತ್ತಾರೆ.

ಇಲ್ಲಿ ಹೆಚ್ಚಿನ ಪಾಲಕರು ಮಗುವಿನ ಸಾಮಾಜಿಕ ಹೊಂದಾಣಿಕೆಗೆ ತಯಾರು ಮಾಡುವಲ್ಲಿ ತಮ್ಮ ಹೊಣೆಯನ್ನು ಅರಿತಿರುವುದು ಕಂಡುಬಂದರೂ ಸುಮಾರು ಅರ್ಧದಷ್ಟು ಪಾಲಕರು ಇವರ ಬಗ್ಗೆ ಉತ್ತಮ ಭಾವನೆ ಹೊಂದಿಲ್ಲದಿರುವುದು, ಮಗುವನ್ನು ಸಮಾಜಮುಖಿಯನ್ನಾಗಿ ಮಾಡುವಲ್ಲಿ ನಮ್ಮೆಲ್ಲರ ಹೊಣೆಯಿರುವುದನ್ನು ಅರ್ಥಮಾಡಿಕೊಂಡಿಲ್ಲದಿರುವುದು ಕಂಡುಬರುತ್ತದೆ. ಈ ನಿರಾಸಕ್ತಿಗೆ ಅವರ ಆರ್ಥಿಕ ಸಮಸ್ಯೆಗಳೂ ಕಾರಣವಾಗಿದ್ದಿರಬಹುದಾದರೂ ಸಮಾಜದಲ್ಲಿ ತಮ್ಮ ಕರ್ತವ್ಯದ ಬಗ್ಗೆ ಅರಿವಿನ ಕೊರತೆ, ಈ ಮಕ್ಕಳಿಗೂ ಈ ಸಮಾಜದಲ್ಲಿ ಎಲ್ಲರಂತೆ ಬದುಕುವ ಹಕ್ಕು

ಇದೆ. ಅದಕ್ಕೆ ಪೂರಕ ತಯಾರಿಯನ್ನು ಮಾಡಬೇಕಾದ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂಬ ತಿಳುವಳಿಕೆಯನ್ನು ಅಲ್ಲಿನ ಶಿಕ್ಷಕರು ಹಾಗೂ ಸಮನ್ವಯ ಶಿಕ್ಷಣ ಪಡೆದ ನುರಿತ ಶಿಕ್ಷಣ ತರಬೇತುದಾರರು ನೀಡಬೇಕಾದ ಅನಿವಾರ್ಯತೆ ಇದೆ.

**ಪ್ರಶ್ನೆ 3 :** ಇಂತಹ ಮಕ್ಕಳಿಗೆ ಶಿಕ್ಷಣ ಕೊಡುವ ಬಗ್ಗೆ ನಿಮ್ಮ ನಿಲುವೇನು?

ಶೇ.75ರಷ್ಟು ಪಾಲಕರು "ಮಗು ಎಲ್ಲಿಯವರೆಗೆ ಕಲಿಯಲು/ಎಷ್ಟು ಕಲಿಯಲು ಸಾಧ್ಯವೋ ಅಷ್ಟನ್ನು ಕಲಿಯಲಿ (ಕಲಿತಷ್ಟು ಕಲಿಯಲಿ). ಮಗು ಕಲಿಯುತ್ತದೆ ಎಂದೆನಿಸಿದರೆ ಸೂಕ್ತ ಶಿಕ್ಷಣ ನೀಡುತ್ತೇವೆ" ಎಂದು ಅಭಿಪ್ರಾಯಪಟ್ಟರೆ ಶೇ.30ರಷ್ಟು ಪಾಲಕರು "ಇಂತಹ ಮಕ್ಕಳಿಗೆ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಕಲಿಯುವ ಅವಕಾಶ ನೀಡುವ ಮೂಲಕ ಶಿಕ್ಷಣ ನೀಡಿ ಅವರಿಗೆ ಉತ್ತಮ ಜೀವನ ನಡೆಸಲು ಅವಕಾಶ ಮಾಡಿಕೊಡಬೇಕು" ಎನ್ನುತ್ತಾರೆ. ಆದರೆ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಹೇಗೆ ಶಿಕ್ಷಣ ನೀಡಬೇಕು? ಈ ಅಗತ್ಯಕ್ಕೆ ತಕ್ಕ ಶಿಕ್ಷಣವನ್ನು ಎಲ್ಲಿ ನೀಡುತ್ತಾರೆ? ಮುಂತಾದ ವಿಚಾರಗಳ ಅರಿವು ಇಲ್ಲದಿರುವುದು ಕಂಡುಬರುತ್ತದೆ. ಮತ್ತೊಂದು ಮುಖ್ಯ ವಿಷಯವೆಂದರೆ ಶೇ.6ರಷ್ಟು ಪಾಲಕರು "ಇಂತಹ ಮಕ್ಕಳಿಗೆ ಯಾವ ಶಿಕ್ಷಣದ ಅಗತ್ಯವೂ ಇಲ್ಲ. ಏನೂ ಕಲಿಯಲು ಸಾಧ್ಯವಿಲ್ಲ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಕಳವಳಕಾರಿಯಾದ ವಿಷಯವಾಗಿದೆ. ಈ ರೀತಿಯ ಅಭಿಪ್ರಾಯ ನೀಡಿರುವ ಪಾಲಕರ ಮಕ್ಕಳು 'ಬುದ್ಧಿಮಾಂದ್ಯ' ಗುಂಪಿಗೆ ಸೇರಿರುವುದರಿಂದ ಇಂತಹ ಮಕ್ಕಳಲ್ಲಿ ಕಲಿಕೆಯಾಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿರುವುದನ್ನು ಕಾಣಬಹುದು.

**ಪ್ರಶ್ನೆ 4 :** ವಿಶೇಷ ಅಗತ್ಯಗಳುಳ್ಳ ಮಕ್ಕಳ ಭವಿಷ್ಯದ ಬಗ್ಗೆ ನಿಮಗೆ ಏನನ್ನಿಸುತ್ತದೆ? ಅವರಿಗೆ ಈ ಯಾವ ರೀತಿಯ ಅವಕಾಶಗಳು ಬೇಕಾಗುತ್ತವೆ?

ಮೇಲಿನ ಪ್ರಶ್ನೆಗೆ ಶೇ.56ರಷ್ಟು ಪಾಲಕರು "ನಮ್ಮ ಮಗು ಹೇಗೋ ವಯಸ್ಸಿಗೆ ಬರುವ ಹೊತ್ತಿಗೆ ತಾನೇ ಸಾಮಾನ್ಯರಂತೆ ತನ್ನ ಜೀವನ ನಡೆಸುವಂತೆ ಆದರೆ ಸಾಕು. ಮನೆಯಲ್ಲಿ ಈ ಮಗುವಿಗೆ ಬೇಕಾದ ವ್ಯವಸ್ಥೆಯನ್ನು ಮಾಡುತ್ತೇವೆ, ಕುರಿ ಸಾಕಾಣಿಕೆ, ಹಸು ಸಾಕಾಣಿಕೆ, ಡೈರಿಗೆ ಹಾಲು ಹಾಕುವುದು, ಅಂಗಡಿಯೊಂದನ್ನು ಹಾಕಿಕೊಡುತ್ತೇವೆ ಅದನ್ನು ನೋಡಿಕೊಂಡು ಜೀವನ ಮಾಡುವಂತಾದರೆ ಸಾಕು" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ಪಾಲಕರಿಗೆ ವಿಶೇಷ ಮಕ್ಕಳಿಗೆ ಶಾಲಾ ಹಂತದಲ್ಲಿ ಅಥವಾ ಅವರಿಗಾಗಿಯೇ ನಿರ್ಮಿಸಿರುವ ಶಾಲೆಗಳಲ್ಲಿ ಶಿಕ್ಷಣ ಕೊಡಿಸಬಹುದು ಎಂಬ ಅರಿವಿಲ್ಲ. ಇನ್ನು ಶೇ.38ರಷ್ಟು ಪಾಲಕರು "ಇವರಿಗೆ ಉದ್ಯೋಗದಲ್ಲಿ ಸಾಕಷ್ಟು ಮೀಸಲಾತಿಯಂತಹ ಅವಕಾಶಗಳನ್ನು ನೀಡುವ ಮೂಲಕ ಮುಖ್ಯವಾಹಿನಿಗೆ ತರುವ ಪ್ರಯತ್ನ ಮಾಡಬೇಕು. ಇವರಿಗೆ ವಿಶೇಷ ಅಗತ್ಯವುಳ್ಳ ಮಕ್ಕಳ ಶಾಲೆಗಳನ್ನು ಹೆಚ್ಚು ಹೆಚ್ಚು ತೆರೆಯಬೇಕು ಮತ್ತು ಆಧುನಿಕ ತಂತ್ರಜ್ಞಾನಗಳನ್ನು ಬಳಸಿ ಹೆಚ್ಚಿನ ಶಿಕ್ಷಣ ನೀಡುವ ಪ್ರಯತ್ನಗಳಾಗಬೇಕು. ಇವರೂ ತಮ್ಮ ತಮ್ಮ ಸಾಮರ್ಥ್ಯಕ್ಕೆ ತಕ್ಕ ಉದ್ಯೋಗ ಮಾಡಬೇಕು" ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದು ಉಳಿದ ಶೇ.6ರಷ್ಟು ಪಾಲಕರ ಹೇಳಿಕೆಯನ್ನು. ಇವರು "ಈ ಮಗುವಿಗೆ ಎಲ್ಲರಂತೆ ಬದುಕೋದು ಕಷ್ಟ. ಸಮಾಜಕ್ಕೆ

ಈ ಮಗುವಿನಿಂದ ಪ್ರಯೋಜನವಿಲ್ಲ, ಅನಾಥಾಲಯಗಳು/ಆಶ್ರಮಗಳಲ್ಲಿ ಬಿಟ್ಟುಬರುವುದು ಉತ್ತಮ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ರೀತಿಯ ಋಣಾತ್ಮಕ ಮನೋಭಾವ ಹೊಂದಿರುವ ಅಥವಾ ಅರಿವಿನ ಕೊರತೆಯಿರುವ ಪಾಲಕರಿಗೆ ಮನವೊಲಿಸಬೇಕಾದ ಅನಿವಾರ್ಯತೆಯಿದೆ.

ಒಟ್ಟಾರೆ ಸರಾಸರಿ ಶೇ.60ರಷ್ಟು ಪಾಲಕರು ತಮ್ಮ ಮಕ್ಕಳ ಬಗ್ಗೆ ಕಾಳಜಿ ವಹಿಸುತ್ತಾ, ಅವರ ಅಗತ್ಯಗಳನ್ನು ಪೂರೈಸುತ್ತಾ, ಅವರ ಜೀವನ ರೂಪಿಸುವಲ್ಲಿ ತಮ್ಮ ಉತ್ತಮ ಪ್ರಯತ್ನಗಳನ್ನು ಮಾಡುತ್ತಿರುವುದನ್ನು ಕಾಣಬಹುದು. ಉಳಿದ ಶೇ.30ರಷ್ಟು ಪಾಲಕರು ಹೇಗೋ ಬೆಳೆಯಲಿ, ನಾವು ಎಷ್ಟು ಸಾಧ್ಯವೋ ಅಷ್ಟು ನೋಡಿಕೊಳ್ಳುತ್ತೇವೆ ಎನ್ನುವ ಸಕಾರಾತ್ಮಕ ಮನೋಭಾವವನ್ನು ಹೊಂದಿರುವುದರಿಂದ ಇವರಿಗೆ ವ್ಯವಸ್ಥೆಯಲ್ಲಿ ಲಭ್ಯವಿರುವ ಅವಕಾಶಗಳ ಬಗ್ಗೆ ಅರಿವು ಮೂಡಿಸಿದರೆ ಸಾಕು, ಈ ಮಕ್ಕಳೂ ಕಲಿಕೆಯಲ್ಲಿ ತೊಡಗಲು ಮತ್ತು ಸ್ವತಃ ಜೀವನ ರೂಪಿಸಿಕೊಳ್ಳಲು ಸಾಧ್ಯವಿದೆ ಎಂಬ ತಿಳುವಳಿಕೆ ನೀಡುವುದರ ಜೊತೆಗೆ ಅವಕಾಶಗಳ ಬಗ್ಗೆ ಮಾರ್ಗದರ್ಶನ ನೀಡುತ್ತಾ ಬಂದರೆ ಇವರು ತಮ್ಮ ಮಕ್ಕಳ ಉತ್ತಮ ಭವಿಷ್ಯದ ಬಗ್ಗೆ ಅಡಿಯಿಡುತ್ತಾರೆ. ಆದರೆ ಉಳಿದ ಶೇ.10ರಷ್ಟು ಋಣಾತ್ಮಕ ಭಾವನೆಯುಳ್ಳ ಪಾಲಕರಿಗೆ ಹೆಚ್ಚಿನ ತಿಳುವಳಿಕೆ ಮತ್ತು ಮಾರ್ಗದರ್ಶನದ ಅವಶ್ಯಕತೆ ಇರುವುದು ಕಂಡುಬರುತ್ತದೆ.

## ಇ. ತರಗತಿ ವೀಕ್ಷಣೆ ಅಂಶಗಳ ವಿಶ್ಲೇಷಣೆ

**ಮಗು 1 :** ತರಗತಿಯಲ್ಲಿ ಮಗು ತಾನಾಗಿಯೇ ಮುಂದಿನ ಬೆಂಚಿನಲ್ಲಿ ಕುಳಿತು ಕೊಂಡಿತ್ತು. ಶಾಲೆಯ ಶಿಕ್ಷಕರಿಗೆ ತಿಳಿದಿರಲಿಲ್ಲ. ಮಗುವಿನ ಬಗ್ಗೆ ಚೈಲ್ಡ್ ವೆಲ್‌ಫೇರ್ ಸ್ಪೆಶಲ್ ನೀಡ್‌ನಿಂದ ವರದಿ ಬಂದ ನಂತರ ಈ ಮಗುವಿನ ಸಮಸ್ಯೆಯ ಬಗ್ಗೆ ತಿಳಿಯಿತು. ಸಾಮಾನ್ಯ ಮಕ್ಕಳಂತೆ ತರಗತಿಯಲ್ಲಿ ಕಲಿಕೆಯಲ್ಲಿ ತೊಡಗಿರುವುದರಿಂದ ಶಿಕ್ಷಕರು ಯಾವುದೇ ವಿಶೇಷ ಗಮನ ಹರಿಸದಿರುವುದು ಕಂಡುಬರುತ್ತದೆ. ಶಿಕ್ಷಕರು ಹೇಳುವಂತೆ ಕಲಿಕೆಯಲ್ಲಿ ಚೆನ್ನಾಗಿ ಭಾಗವಹಿಸುತ್ತಾನೆ ಮತ್ತು ತರಗತಿಯಲ್ಲಿ ಗಮನಿಸುವಾಗ ಉತ್ತಮವಾಗಿ ಭಾಗವಹಿಸುವುದು ತಪ್ಪಿಲ್ಲದೆ, ಅಂದವಾಗಿ ಬರೆಯುವುದು ಕಂಡುಬಂದಿತು.

**ಮಗು 2 :** ತರಗತಿಯಲ್ಲಿ ಸಾಮಾನ್ಯ ಮಕ್ಕಳಂತೆ ಇರುತ್ತಾನೆ. ಇವನಿಗಾಗಿ ಯಾವುದೇ ವಿಶೇಷ ಪ್ರಯತ್ನಗಳನ್ನು ಮಾಡುವುದಿಲ್ಲ. ಬದಲಾಗಿ ಕಲಿಕೆಗೆ ಹೆಚ್ಚು ಒತ್ತಡ ಹಾಕದೆ ಸುಮ್ಮನೆ ಬಿಡಲಾಗಿದೆ. ಶಿಕ್ಷಕರೂ ಕೂಡ ಇದನ್ನು ಅನುಮೋದಿಸುತ್ತಾರೆ. ಶಾಲೆಯಲ್ಲಿ ಎಲ್ಲಾ ಮಕ್ಕಳ ಜೊತೆ ಬೆರೆಯುತ್ತಾನೆ. ಶಿಕ್ಷಕರಿಗೆ ಹಾಜರಾತಿ ಪುಸ್ತಕ ತಂದುಕೊಡುವುದು, ಗಿಡಗಳಿಗೆ ನೀರು ಹಾಕುವುದು ಮುಂತಾದ ಕೆಲಸಗಳನ್ನು ಮಾಡುತ್ತಾನೆ.

**ಮಗು 3 :** ಕಾಲುಗಳು ತಿರುಚಿಕೊಂಡಂತಿದ್ದು ಸಾಮಾನ್ಯರಂತೆ ನಡೆಯಲು ಸಾಧ್ಯವಿಲ್ಲ. ಕೈಗಳೂ ಕೂಡ ಸಾಮಾನ್ಯರಂತೆ ಇರದೆ ತಿರುಚಿಕೊಂಡಿವೆ. ಹುಟ್ಟಿನಿಂದಲೇ ಈ ಸಮಸ್ಯೆ ಇದೆ. ಆದರೆ ಈ ಮಗುವಿಗಾಗಿ ಯಾವುದೇ ವಿಶೇಷ ಅಗತ್ಯಗಳನ್ನು ನೀಡಿಲ್ಲ. ಸಾಮಾನ್ಯ ಮಕ್ಕಳಂತೆ ತರಗತಿಯಲ್ಲಿ ಇರುತ್ತಾನೆ. ಕಲಿಕೆಯಲ್ಲಿ ಆಸಕ್ತಿಯಿದೆ. ಕಲಿಕೆಗೆ ಪ್ರಯತ್ನಿಸುತ್ತಾನೆ. ನಿಧಾನವಾಗಿ ಬರೆಯುತ್ತಾನೆ.

**ಮಗು 4 :** ಹುಟ್ಟಿದಾಗಿನಿಂದ ಈ ಹೆಣ್ಣು ಮಗುವಿಗೆ ಕೈ ಸ್ವಾಧೀನವಿಲ್ಲ. ಆದರೆ ಥೆರಪಿ ಮಾಡುವ ಮೂಲಕ ಹಾಗೂ ದಿನನಿತ್ಯದ ಕೆಲಸಗಳನ್ನು ಮಾಡುವ ಮೂಲಕ ಸರಿಪಡಿಸಿಕೊಳ್ಳಬಹುದು. ಶಾಲೆಯಲ್ಲಿ ಬರೆಯಲು ಹೆಚ್ಚಿನ ಅವಕಾಶ ನೀಡುತ್ತಿಲ್ಲ. ಇವಳಿಗೆ ವಿಶೇಷ ಅವಕಾಶ ಒದಗಿಸುವ ಅಗತ್ಯವಿಲ್ಲ, ಆತ್ಮವಿಶ್ವಾಸ ತುಂಬುವ ಅಗತ್ಯವಿದೆ. ತರಗತಿಯಲ್ಲಿ ಈ ಮಗು ಉದಾಸೀನತೆಯಿಂದ ಇರುತ್ತದೆ. ಶಿಕ್ಷಕರು ಹೇಳುವ ಪ್ರಕಾರ ಎಲ್ಲರೂ ತೋರಿಸುವ ಕರುಣೆಯನ್ನು ತನ್ನ ಲಾಭಕ್ಕೆ ಬಳಸಿಕೊಳ್ಳುತ್ತಾಳೆ.

**ಮಗು 5 :** ಹುಟ್ಟುತ್ತಲೇ ಬುದ್ಧಿಮಾಂದ್ಯ ಮಗು. ಈ ಮಗುವಿಗೆ ತನ್ನ ನಿತ್ಯ ಕರ್ಮಗಳಲ್ಲಿ ನಿಯಂತ್ರಣವಿರುವುದಿಲ್ಲ. ಶಾಲೆಯ ನಿರ್ಲಕ್ಷ್ಯದಿಂದ ಮನೆಯಲ್ಲಿರುತ್ತದೆ. ಮಕ್ಕಳ ಜೊತೆ ಇರುತ್ತದೆ ಆದರೆ ಸುಮ್ಮನೆ ಕುಳಿತಿರುತ್ತದೆ. ಈ ಮಗುವನ್ನು ಸಾಮಾನ್ಯ ಮಕ್ಕಳಂತೆ ನೋಡುತ್ತಾರೆ.

**ಮಗು 6 :** ಶಾಲೆಯಲ್ಲಿ ಎಲ್ಲಾ ಮಕ್ಕಳ ಜೊತೆ ಇರುತ್ತಾನೆ. ವಿಕಾರ ಶಬ್ದಗಳಿಂದ ತರಗತಿಗೆ ತೊಂದರೆ ಕೊಡುತ್ತಾನೆ. ಈ ಮಗುವಿನ ಕಲಿಕೆಗೆ ಯಾವುದೇ ವಿಶೇಷ ಪ್ರಯತ್ನ ಮಾಡುವುದಿಲ್ಲ. ತರಗತಿಯಲ್ಲಿ ಒಂದು ಕಡೆ ಇರುತ್ತಾನೆ, ಇದ್ದಕ್ಕಿದ್ದಂತೆ ತರಗತಿಯಲ್ಲಿ ವಿಚಿತ್ರ ಶಬ್ದ ಮಾಡುತ್ತಾ ಗಲಾಟೆ ಮಾಡುತ್ತಾನೆ.

**ಮಗು 7 :** ಶಾಲೆಗೆ ಬಂದಿಲ್ಲ, ಶಾಲೆಗೆ ಕರೆತರುವ ಪ್ರಕ್ರಿಯೆ ನಡೆದಿಲ್ಲ. ಸಂಪೂರ್ಣ ದೃಷ್ಟಿದೋಷವಿದೆ. ಮನೆಯಲ್ಲಿಯೇ ಇರುವುದು ಕಂಡುಬಂತು. ಶಾಲೆಗೆ ಬರಬಹುದಾದ ಮಗುವಾದರೂ ಶಾಲೆಗೆ ಬರುತ್ತಿಲ್ಲ. ಟಿ.ವಿ.ಯ ಧ್ವನಿಗಳನ್ನು ಗುರುತಿಸಿ ಅದರಂತೆ ಉಚ್ಚರಿಸುತ್ತಾಳೆ.

**ಮಗು 8 :** ತರಗತಿಯಲ್ಲಿ ಅವನಿಗೆ ಇಷ್ಟವಾದ ಸ್ಥಳದಲ್ಲಿ ಕೂರುತ್ತಾನೆ. ಈ ಮಗುವಿನ ಬಗ್ಗೆ ಶಿಕ್ಷಕರು ಹೆಚ್ಚು ತಲೆಕೆಡಿಸಿಕೊಂಡಿಲ್ಲ. ಬೇರೆ ಮಕ್ಕಳ ಜೊತೆ ಚೆನ್ನಾಗಿ ಬೆರೆಯುತ್ತಾನೆ. ಬೇಗ ಕಲಿಯುತ್ತಾನೆ.

**ಮಗು 9 :** ಕನ್ನಡಕದ ಬಳಕೆಯಿಂದ ಸರಿಪಡಿಸಲಾಗಬಹುದಾದ ದೃಷ್ಟಿದೋಷವಿದೆ. ನೆಲದಲ್ಲಿ 2ನೇ ಸಾಲಿನಲ್ಲಿ ಎಲ್ಲಾ ಮಕ್ಕಳೊಂದಿಗೆ ಕೂರುತ್ತಾಳೆ. ಶಾಲೆಯ ಶಿಕ್ಷಕರು ಮಗುವಿನ ದೃಷ್ಟಿದೋಷದ ಬಗ್ಗೆ ಕಾಳಜಿ ತೋರುತ್ತಾರೆ ಮತ್ತು ಇವಳಿಗೆ ಕನ್ನಡಕವನ್ನು ಕೊಡಿಸಿದ್ದಾರೆ. ಕಲಿಕೆಗೆ ಆಗಾಗ ಹತ್ತಿರ ಬಂದು ಸಹಕರಿಸುತ್ತಾರೆ.

**ಮಗು 10 :** ಶಿಕ್ಷಕರು ಇವನನ್ನು ಸಾಧ್ಯವಾದಷ್ಟು ಶಾಲೆಗೆ ಕರೆತರುವ ಪ್ರಯತ್ನ ಮಾಡಿರುತ್ತಾರೆ. ಶಾಲೆಯಲ್ಲಿ ಅವನಿಗಿಷ್ಟದ ಜಾಗದಲ್ಲಿ ಸುಮ್ಮನೆ ಕೂರುತ್ತಾನೆ. ಶಿಕ್ಷಕರು ಸದಾ ಗಮನವಿರಿಸಿರುವುದು ಕಂಡುಬಂತು. ಬೇರೆ ಮಕ್ಕಳಿಗೆ ಈ ಮಗುವಿನ ಜವಾಬ್ದಾರಿ ತೆಗೆದುಕೊಳ್ಳಲು ತಿಳಿಸಿದ್ದಾರೆ. ಆಟಗಳಲ್ಲಿ ಇತರೆ ಮಕ್ಕಳ ಜೊತೆ ಬೆರೆಯುವಂತೆ ನೋಡಿಕೊಳ್ಳುತ್ತಾರೆ. ಆದರೆ ಕಲಿಕೆಗೆ ಯಾವುದೇ ವಿಶೇಷ ಪ್ರಯತ್ನ ಮಾಡಿರುವುದಿಲ್ಲ.

**ಮಗು 11 :** ತರಗತಿಯಲ್ಲಿ ಮೊದಲ ಸಾಲಿನಲ್ಲಿ ಕುಳಿತುಕೊಳ್ಳಲು ಶಿಕ್ಷಕರು ವ್ಯವಸ್ಥೆ ಮಾಡಿದ್ದಾರೆ. ಬರೆಯಲು ಓದಲು ಕಷ್ಟವಾಗುವುದಿಲ್ಲ. ಶಿಕ್ಷಕರು ಇತರ ಮಕ್ಕಳಿಗೆ ಇವಳನ್ನು ರೇಗಿಸದಂತೆ ಹೇಳುತ್ತಿದ್ದುದು ಕಂಡುಬಂತು. ಶಿಕ್ಷಕರೂ ಸಹ ತಿಳಿಸಿದರು. ಕುಳ್ಳಗಿರುವ ಈ ಮಗುವಿಗೆ ತನ್ನನ್ನು ಬೇರೆ ಮಕ್ಕಳು ರೇಗಿಸುತ್ತಾರೆ ಎಂಬ ನೋವು ಇದೆ.

**ಮಗು 12 :** ಎಲ್ಲ ಮಕ್ಕಳ ಜೊತೆ ಇರುತ್ತಾಳೆ. ಆದರೆ ಮಕ್ಕಳ ಜೊತೆ ಇರುವಾಗ ತನ್ನ ಅಂಗಾಗಗಳನ್ನು ಮುಟ್ಟಿಕೊಳ್ಳುವುದರಿಂದ ಇತರೆ ಮಕ್ಕಳಿಗೆ ಅಸಹ್ಯವಾಗುತ್ತದೆ. ಶಿಕ್ಷಕರು ಸಾಕಷ್ಟು ಅಂಶಗಳನ್ನು ಹೇಳುತ್ತಾ ಚರ್ಚಿಸುವುದರಿಂದ ಮೇಲೆ ತಿಳಿಸಿದ ಅವಳ ವರ್ತನೆಗಳು ಕಡಿಮೆಯಾಗಿವೆ ಎನ್ನುವುದು ಶಿಕ್ಷಕರ ಅಭಿಪ್ರಾಯವಾಗಿದೆ. ತರಗತಿಯಲ್ಲಿ ಎಲ್ಲ ಮಕ್ಕಳಂತೆ ನೆಲದಲ್ಲಿ ಕೂರುತ್ತಾಳೆ. ಶಿಕ್ಷಕರ ಪ್ರಕಾರ ಇವಳು ಬಹಳ ತುಂಟ ಹುಡುಗಿ. ಈ ಮಗುವಿಗೆ ಪೋಷಕರ ಸಹಾಯ ತುಂಬಾ ಮುಖ್ಯ.

**ಮಗು 13 :** ಬಲಗೈ ತುಂಡಾಗಿದೆ ಅಷ್ಟೆ, ಈ ಮಗು ಎಲ್ಲರ ಜೊತೆ ಸಹಜವಾಗಿ ಇರುತ್ತಾಳೆ. ಖುಷಿಯಾಗಿರುತ್ತಾಳೆ. ಎರಡನೆ ಬೆಂಚಿನ ಕೊನೆಯಲ್ಲಿ ಕೂರುತ್ತಾಳೆ. ತರಗತಿಯ ಲೀಡರ್. ಶಿಕ್ಷಕರ ಪ್ರಕಾರ ಇವಳು ಚೆನ್ನಾಗಿ ಭಾಗವಹಿಸುತ್ತಾಳೆ. ಕಲಿಯುತ್ತಾಳೆ.

**ಮಗು 14 :** ಕೆಲವೊಮ್ಮೆ ಮಾತ್ರ ಶಾಲೆಗೆ ಕರೆತರುತ್ತಾರೆ. ಸಂಗೀತವೆಂದರೆ ಇಷ್ಟ. ಸದಾ ಹಾಡು ಕೇಳಲು ಅವನಿಗೆ ಖುಷಿಯಾಗುತ್ತದೆ. ಹಾಡು ನಿಂತರೆ ಅಳುತ್ತಾನೆ. ವಾಕರ್‌ನಲ್ಲಿ ನಿಲ್ಲಬಲ್ಲ ಹಾಗೂ ಕುಳಿತುಕೊಳ್ಳಲು ಆಗುವ ಮಗು. ಕಲಿಕೆಯಲ್ಲಿ ಯಾವುದೇ ಸ್ಪಂದನೆ ಇರುವುದಿಲ್ಲ. ಸುಮ್ಮನೆ ಕೂರುವ ಮಗು. ಹೆಚ್ಚಾಗಿ ಸ್ಪಂದಿಸುವುದಿಲ್ಲ. ಹೆಚ್ಚಾಗಿ ಗುರುತಿಸಲು ಸಾಧ್ಯವಾಗಲ್ಲ. ಪಾಲಕರು ಉತ್ತಮವಾಗಿ ನೋಡಿಕೊಳ್ಳುತ್ತಾರೆ. ಮನೆಯ ಕೊಠಡಿಯೂ ಕೂಡ ಸ್ವಚ್ಛವಾಗಿದೆ.

**ಮಗು 15 :** ಅಜ್ಜಿ ಮನೆಯಲ್ಲಿರುವ ಮಗು. ದೇಹದ ಅಂಗಾಗಗಳು ಚೆನ್ನಾಗಿವೆ, ಆದರೆ ಒಂದು ನಿಮಿಷವೂ ಕೂರುವುದಿಲ್ಲ ಮತ್ತು ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಕೀಟಲೆ ಮಾಡುತ್ತಾನೆ. ತರಗತಿಯಲ್ಲಿ ಕೂರುವುದಿಲ್ಲ. ಹೈಪರ್ ಮಗು. ತರಗತಿಯಲ್ಲಿ ಕೂರುವ ಸಮಯ ಕಡಿಮೆ. ಎಲ್ಲಾ ತರಗತಿಗಳಲ್ಲೂ ಕೂರುತ್ತಾನೆ. ಸಾಕು ಎನಿಸಿದಾಗ ಮನೆಗೆ ಓಡುತ್ತಾನೆ. ಮನೆಯಲ್ಲಿರುವ ಕೈಗೆ ಸಿಕ್ಕ ವಸ್ತುಗಳನ್ನೆಲ್ಲಾ ಒಡೆದು ಹಾಕುತ್ತಾನೆ. ಇವನ ಕಲಿಕೆಗಾಗಿ ಯಾವುದೇ ಪ್ರಯತ್ನವಿರುವುದಿಲ್ಲ.

**ಮಗು 16 :** ಕಾಲಿನಲ್ಲಿ ತೊಂದರೆ ಇದೆ. ಕಾಲು ಸೊಟ್ಟಗಾಗಿದೆ. ಶಾಲೆಯಲ್ಲಿ ಇವನಿಗೆ ಶಿಕ್ಷಕರು ಹೆಚ್ಚು ಸಮಯ ನೀಡುತ್ತಾರೆ. ತರಗತಿಯಲ್ಲಿ ಬೆಂಚಿನ ಹೊರಭಾಗಕ್ಕೆ ಸೇರಿದಂತೆ ಕೂರುತ್ತಾನೆ. ಸಾಮಾನ್ಯ ಮಕ್ಕಳಿಗಿಂತಲೂ ಕಲಿಕೆಯಲ್ಲಿ ಚೆನ್ನಾಗಿ ತೊಡಗಿಕೊಂಡಿದ್ದಾನೆ

## ಉಪಸಂಹಾರ

ಬಹುತೇಕ ಶಿಕ್ಷಕರು "ಈ ಮಕ್ಕಳಿಗೆ ಸಾಕಷ್ಟು ಅನುಕೂಲ ಮಾಡಿಕೊಡಲಾಗಿದೆ, ಈ ಮಕ್ಕಳನ್ನು ಶಾಲೆಯಲ್ಲಿ ಇತರೆ ಮಕ್ಕಳೊಂದಿಗೆ ಹೊಂದಿಕೊಂಡು ಹೋಗಲು ಅವಕಾಶ ಮಾಡಿಕೊಟ್ಟಿರುವುದೇ ಸಾಧನೆ" ಎಂಬಂತೆ ಹೇಳಿರುವುದನ್ನು ಗಮನಿಸಬಹುದು. ಬಹುತೇಕ ಶಾಲೆಗಳಲ್ಲಿ ಈ ಮಕ್ಕಳ ಅನುಕೂಲಕ್ಕಾಗಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸದಿರುವುದು ಕಂಡುಬರುತ್ತದೆ ಮತ್ತು ತರಗತಿ ಪ್ರಕ್ರಿಯೆಯಲ್ಲಿ ಈ ಮಕ್ಕಳಿಗೆ ಅಗತ್ಯವಾದ ಮತ್ತು ವಿಶೇಷವಾದ ಪ್ರಯತ್ನಗಳನ್ನು ಮಾಡುತ್ತಿಲ್ಲದಿರುವುದನ್ನು ಗಮನಿಸಬಹುದಾಗಿದೆ.

ಕೆಲವು ಶಿಕ್ಷಕರು "ಈ ಮಕ್ಕಳಿಂದಾಗಿ ಶಾಲೆಯಲ್ಲಿ ಇತರೆ ಮಕ್ಕಳಲ್ಲಿಯೂ ಕಲಿಕೆಯಾಗುತ್ತಿಲ್ಲ. ಬಹಳ ತೊಂದರೆ, ಇವರು ಇಡೀ ತರಗತಿಯಲ್ಲಿ ಅಸಹ್ಯ (ಗಲೀಜು) ಮಾಡುತ್ತಾರೆ, ವಿಚಿತ್ರ ಶಬ್ದ ಮಾಡುವ ಮೂಲಕ ಇತರೆ ಮಕ್ಕಳಿಗೆ ತೊಂದರೆ ಕೊಡುತ್ತಾರೆ, ಪಾಲಕರು ಇವರನ್ನು ಮನೆಯಲ್ಲಿಯೇ ನೋಡಿಕೊಂಡರೆ ಒಳ್ಳೆಯದು" ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಹೆಚ್ಚಿನ ಪಾಲಕರು ಈ ಮಕ್ಕಳನ್ನು ಪಡೆದಿರುವುದಕ್ಕೆ ಪಶ್ಚಾತ್ತಾಪ ಪಡುವುದರ ಜೊತೆಗೆ "ಏನೋ ನಾವು ಪಡೆದ ಕರ್ಮ ಅನುಭವಿಸಲೇಬೇಕು, ನಮ್ಮ ಕರ್ತವ್ಯವನ್ನು ನಾವು ಮಾಡುತ್ತೇವೆ" ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ ಮತ್ತು ಹೆಚ್ಚಿನವರಿಗೆ ಈ ರೀತಿಯ ಬಹುತೇಕ ನ್ಯೂನತೆಗಳಿಗೆ ಚಿಕಿತ್ಸೆ ಕೊಡಿಸಬಹುದು ಎಂಬ ಅರಿವು ಇಲ್ಲದಿರುವುದನ್ನು ಕಾಣಬಹುದಾಗಿದೆ.

ಈ ಮೇಲಿನ ವಿಷಯಗಳನ್ನು ಗಮನಿಸಿದರೆ ಶಿಕ್ಷಕರಿಗೆ ಸಂವಿಧಾನದ ಮೂಲ ಆಶಯಗಳ ಅರಿವಿಲ್ಲದಿರುವುದು ಕಂಡುಬರುತ್ತದೆ ಮತ್ತು ಪ್ರತಿಯೊಬ್ಬರಲ್ಲಿಯೂ ಈ ವಿಶೇಷ ಮಕ್ಕಳು ದೇಶದ ಸಂಪನ್ಮೂಲ ಮತ್ತು ಶಕ್ತಿ ಎಂಬುದಾಗಿ ನೋಡಬೇಕಾದ ದೃಷ್ಟಿಕೋನವನ್ನು ಬೆಳೆಸಬೇಕಾದ ಅನಿವಾರ್ಯತೆ ಕಂಡುಬರುತ್ತದೆ. ಶಾಲಾ ಹಂತದಲ್ಲಿ ಸಮನ್ವಯ ಶಿಕ್ಷಣವನ್ನು ಇನ್ನೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಾದ ಅನಿವಾರ್ಯತೆಯನ್ನು ಈ ಅಧ್ಯಯನ ಎತ್ತಿಹಿಡಿಯುತ್ತದೆ.

ಈ ಅಧ್ಯಯನದಿಂದ ಕಂಡುಕೊಂಡ ಮುಖ್ಯ ಒಳನೋಟವೆಂದರೆ, ಈ ಎಲ್ಲಾ ಶಾಲೆಗಳು ಇನ್ನೂ ವಿಕಲಚೇತನವನ್ನು ಮಾನವ ಹಕ್ಕುಗಳ ಮಾದರಿಯಲ್ಲಿ ನೋಡುತ್ತಿಲ್ಲ. ನಮ್ಮ ಶಿಕ್ಷಕರು ಈ ವಿಷಯದಲ್ಲಿ ಇನ್ನೂ ಹೆಚ್ಚು ಸಂವೇದನಾಶೀಲರಾಗುವ ಅಗತ್ಯ ಇದೆ. ಶಿಕ್ಷಕರಿಗೆ 'ಒಳಗೊಳ್ಳುವಿಕೆ' ಎಂಬ ಪರಿಕಲ್ಪನೆಯ ಸೊಗಸು ಅರ್ಥವಾಗಿಲ್ಲ. ಇದರ ಸಂಪೂರ್ಣ ಆಳ ಮತ್ತು ಅಗಾಧತೆಯ ಅರಿವು ಇನ್ನೂ ಆಗಿಲ್ಲ ಎಂಬುದನ್ನು ಈ ಸಂಶೋಧನೆ ತೋರಿಸಿಕೊಡುತ್ತದೆ. ಈ ಹೆಚ್ಚಿನ ಶಾಲೆಗಳು ಮತ್ತು ಪೋಷಕರು ವಿಕಲಚೇತನವನ್ನು ಇನ್ನೂ ಕ್ರಿಯಾತ್ಮಕ ಹಾಗೂ ಕಲ್ಯಾಣ ಮಾದರಿಗಳನ್ನು ಅಳವಡಿಸಿಕೊಂಡು ನೋಡುತ್ತಾರೆ. ಇದನ್ನು ಬದಲಿಸುವ ಅಗತ್ಯವಿದೆ.

ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು 'ಒಳಗೊಳ್ಳುವಿಕೆ'ಯನ್ನು ಎಷ್ಟರ ಮಟ್ಟಿಗೆ ಪ್ರತಿಪಾದಿಸುತ್ತದೆಂದರೆ, ವಿಕಲಚೇತನರಿಗಾಗಿಯೇ ಪ್ರತ್ಯೇಕ ಶಾಲೆಗಳು ಇರುವುದರ ಬದಲು, ಇತರ ಸಾಮಾನ್ಯ ಸರ್ಕಾರಿ ಶಾಲೆಗಳೊಂದಿಗೆ ಸೇರಿಕೊಂಡಾಗ ಮಾತ್ರ ಒಂದು ಅರ್ಥಪೂರ್ಣ ಕಲಿಕಾ ಪ್ರಕ್ರಿಯೆ ಸಾಧ್ಯ ಎಂದು ಬಲವಾಗಿ ನಂಬುತ್ತದೆ. ಪ್ರತ್ಯೇಕಿಸುವುದರಿಂದ ವಿಶೇಷ ಅಗತ್ಯಗಳುಳ್ಳ ಮಕ್ಕಳಿಗೆ ಮಾತ್ರವಲ್ಲದೆ ಬೇರೆ ಎಲ್ಲಾ ಮಕ್ಕಳಿಗೂ ಕೂಡಾ ಶೈಕ್ಷಣಿಕವಾಗಿ ಒಂದು ದೊಡ್ಡ ನಷ್ಟ ಎಂಬುದು ಇದರ ನಿಲುವು. ಈ ನಿಟ್ಟಿನಲ್ಲಿ ಶಾಲೆ ಮತ್ತು ಶಿಕ್ಷಕರ ಮೇಲೆ ಇಟ್ಟಿರುವ ನಿರೀಕ್ಷೆ ಅಪಾರ. ಶಿಕ್ಷಕರು ಪ್ರತಿಯೊಂದು ಹಂತದಲ್ಲಿ – ಪಠ್ಯ ಯೋಜನೆಯಿಂದ ಹಿಡಿದು, ತರಗತಿಯಲ್ಲಿ ಬಳಸುವ ಸಾಮಗ್ರಿಗಳು, ಪಾಠ ಹೇಳಿಕೊಡುವ ರೀತಿ ಎಲ್ಲವನ್ನೂ 'ಒಳಗೊಳ್ಳುವಿಕೆಯ' ದೃಷ್ಟಿಯಿಂದಲೇ ಆಯೋಜಿಸಬೇಕಾಗುತ್ತದೆ.

ಕರುಣೆ, ಅನುಕಂಪ ತೋರಿಸುವುದು ಸುಲಭ. ಆದರೆ ಗೌರವದಿಂದ ಅವರ ಇರುವಿಕೆಗೂ ಮಹತ್ವ ಕೊಟ್ಟು ನೋಡಿಕೊಳ್ಳಬೇಕಾಗುವುದು ದೊಡ್ಡ ಸವಾಲು.

ಈ ಬಗ್ಗೆ ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಪ್ರಾಧ್ಯಾಪಕರಾದ ಅಂಕುರ್ ಮದನ್ ಹೇಳುವ ಹಾಗೆ, ಶಿಕ್ಷಣಕ್ಕೆ ಸಂಬಂಧಪಟ್ಟ ಮುಖ್ಯ ದಾಖಲೆ ಮತ್ತು ಪಾಲಿಸಿಗಳಲ್ಲಿ 'ಒಳಗೊಳ್ಳುವಿಕೆಯ' ಉಲ್ಲೇಖ ಭರವಸೆ ಮೂಡಿಸುವಂತಿದ್ದರೂ, ಅದು ಸಾಕಾರಗೊಳ್ಳುವುದು ಶಾಲೆಗಳು ಎಷ್ಟು ನಿಷ್ಠೆ ಮತ್ತು ತುಂಬು ಹೃದಯದಿಂದ ತಮ್ಮ ನಂಬಿಕೆ ಮತ್ತು ಆಚರಣೆಗಳಲ್ಲಿ ಇದನ್ನು ಸ್ವೀಕರಿಸುತ್ತವೆ ಎಂಬುದರ ಮೇಲೆ ಅವಲಂಬಿತವಾಗಿದೆ. ಹೆಚ್ಚಾಗಿ ಶಾಲೆಗಳು 'ಒಳಗೊಳ್ಳುವಿಕೆ'ಯನ್ನು ಒಂದು ಹೊರೆಯಾಗಿ ಪರಿಗಣಿಸುತ್ತವೆ. ಇದನ್ನು ನಾವು ಶಿಕ್ಷಕರು ಕೊಟ್ಟ ಪ್ರತಿಕ್ರಿಯೆಗಳಲ್ಲಿ ಕಾಣಬಹುದು. ಭಿನ್ನತೆಯಲ್ಲಿ ಕೊರತೆಯನ್ನು ಕಾಣುವ ಮನೋಭಾವವನ್ನು ಹೋಗಲಾಡಿಸಲು ಮತ್ತು 'ಒಳಗೊಳ್ಳುವಿಕೆಯ' ಸೊಗಸನ್ನು ಅರಿತು ಶೈಕ್ಷಣಿಕ ಅನುಭವವನ್ನು ಸಮೃದ್ಧವಾಗಿ ಮಾಡಲು ಶಿಕ್ಷಕರಿಗೆ ಇನ್ನೂ ಹೆಚ್ಚಿನ ನೆರವಿನ ಅಗತ್ಯವಿದೆ ಎಂಬುದನ್ನು ಈ ಸಂಶೋಧನೆ ತೋರಿಸಿಕೊಡುತ್ತದೆ.

ಒಟ್ಟಿನಲ್ಲಿ ಪ್ರತಿಯೊಬ್ಬರಿಗೂ ಅವರವರ ಅಗತ್ಯ ಮತ್ತು ಸಾಮರ್ಥ್ಯಗಳನ್ನು ಅರಿತು ಶಿಕ್ಷಣ ನೀಡಬೇಕಿರುವ ಸಂದರ್ಭದಲ್ಲಿ ವಿಶೇಷ ಅಗತ್ಯಗಳುಳ್ಳ ಮಕ್ಕಳ ಬಾಲ್ಯ, ಶಿಕ್ಷಣ ಹಾಗೂ ಅವರ ಬಗ್ಗೆ ಶಿಕ್ಷಕರು, ಪಾಲಕರು ತಳೆದಿರುವ ಮನೋಭಾವಗಳನ್ನು ಈ ಅಧ್ಯಯನದ ಮೂಲಕ ತೆರೆದಿಡುವ ಪ್ರಯತ್ನ ಮಾಡಲಾಗಿದೆ.

## ಪರಾಮರ್ಶನೆ

Madan, A. (2014). Inclusion is the Way Forward. Learning Curve, 4. special_ed_final1.pdf. (n.d.). Retrieved from:

http://www.ncert.nic.in/new_ncert/ncert/rightside/links/pdf/focus_group/special_ed_final1.pdf

**ಎನ್. ಶೈಲಾ** : ಕನ್ನಡದಲ್ಲಿ ಸ್ನಾತಕೋತ್ತರ ಹಾಗೂ ಬಿ.ಎಡ್. (ವಿಶೇಷ) ಪದವಿ ಗಳಿಸಿರುವ ಇವರು ಕಳೆದ ನಾಲ್ಕು ವರ್ಷಗಳಿಂದ ಸಾರ್ವಜನಿಕ ಶಿಕ್ಷಣ ಇಲಾಖೆ ಮಂಡ್ಯ, ಇಲ್ಲಿ 'ದಿವ್ಯಾಂಗ ಮಕ್ಕಳ ಶಿಕ್ಷಣ ಹಾಗೂ ಕಲ್ಯಾಣ' ವಿಭಾಗದಲ್ಲಿ ಜಿಲ್ಲಾ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಶಿಕ್ಷಕರ ವೃತ್ತಿಪರ ಬೆಳವಣಿಗೆಯಲ್ಲಿ ನಿರತರಾಗಿದ್ದಾರೆ. ತಮ್ಮ ಹದಿನೆಂಟು ವರ್ಷಗಳ ಶಿಕ್ಷಕ ವೃತ್ತಿಯ ಅನುಭವವನ್ನು ಪ್ರಸ್ತುತ ವೃತ್ತಿಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದ್ದಾರೆ.

*ಸಂಪರ್ಕ :* shylan453@gmail.com